Teachingninja.in

Latest Govt Job updates

Private Job updates

Free Mock tests available

Visit - teachingninja.in

Teachingninja.in

# Karnataka
# Forest Guard

## Previous Year Paper
### 5 Dec 2021 (Kannada)

Teachingninja.in

1. ಒಂದು ಚೌಕದ ಪ್ರತಿಯೊಂದು ಬದಿಯ ಅಳತೆಯನ್ನು 25% ಹೆಚ್ಚಿಸಿದಾಗ, ಅದರ ಕ್ಷೇತ್ರಫಲದಲ್ಲಿ ಉಂಟಾಗುವ ಶೇಕಡಾವಾರು ಬದಲಾವಣೆ ಎಷ್ಟು ?
   (A) 56.25 (B) 65.25 (C) 65 (D) 56

2. ತಾಜಾ ಹಣ್ಣುಗಳು 68% ನೀರಿನಾಂಶವನ್ನು ಹೊಂದಿರುತ್ತವೆ ಮತ್ತು ಒಣ ಹಣ್ಣುಗಳು 20% ನೀರಿನಾಂಶವನ್ನು ಹೊಂದಿರುತ್ತವೆ. 100 ಕೆಜಿ ತಾಜಾ ಹಣ್ಣುಗಳಿಂದ ಎಷ್ಟು ಒಣ ಹಣ್ಣುಗಳನ್ನು ಪಡೆಯಬಹುದು ?
   (A) 20 ಕೆಜಿ (B) 30 ಕೆಜಿ (C) 40 ಕೆಜಿ (D) 50 ಕೆಜಿ

3. ಕೆಳಗೆ ನೀಡಿದ ಹೇಳಿಕೆಗಳು ಮತ್ತು ಅದಕ್ಕೆ ಸಂಬಂಧಿಸಿದ ತೀರ್ಮಾನಗಳನ್ನು ಸರಿಯಾಗಿ ಓದಿಕೊಳ್ಳಿ. ಹೇಳಿಕೆಗಳಲ್ಲಿರುವ ಮಾಹಿತಿಯು ಸಾಮಾನ್ಯವಾದ ವಾಸ್ತವಾಂಶಗಳಿಗಿಂತ ವ್ಯತಿರಿಕ್ತವಾಗಿದ್ದರೂ, ಅವುಗಳನ್ನು ಸರಿಯಾದದ್ದೆಂದು ಊಹಿಸಿಕೊಂಡು, ಕೆಳಗೆ ನೀಡಲ್ಪಟ್ಟ ತೀರ್ಮಾನಗಳಲ್ಲಿ, ಹೇಳಿಕೆಗಳಿಗೆ ತರ್ಕಬದ್ಧವೆನಿಸುವಂತಹ ರೀತಿಯಲ್ಲಿ ಅನುಸರಿಸುವ ತೀರ್ಮಾನಗಳನ್ನು ಗುರುತಿಸಿ.

   **ಹೇಳಿಕೆ :** ಎಲ್ಲಾ ಕಲಾಕಾರರು ವಿಚಿತ್ರ ಮನೋಭಾವವುಳ್ಳವರು. ಕೆಲವು ಕಲಾಕಾರರು ಮಾದಕವಸ್ತು ವ್ಯಸನಿಗಳು. ಆಶಾಭಂಗಕ್ಕೆ ಒಳಗಾದವರು ಮಾದಕವಸ್ತು ವ್ಯಸನಿಗಳಾಗುವ ಸಾಧ್ಯತೆಯನ್ನು ಹೊಂದಿರುತ್ತಾರೆ.

   **ತೀರ್ಮಾನ :** I. ವಿಚಿತ್ರ ಮನೋಭಾವವುಳ್ಳ ವ್ಯಕ್ತಿಗಳು ಸಾಮಾನ್ಯವಾಗಿ ಆಶಾಭಂಗಗೊಳ್ಳುತ್ತಾರೆ.
   II. ಆಶಾಭಂಗಗೊಂಡ ಎಲ್ಲಾ ವ್ಯಕ್ತಿಗಳೂ ಮಾದಕವಸ್ತು ವ್ಯಸನಿಗಳಾಗುತ್ತಾರೆ.
   III. ಕಲಾಕಾರರು ಆಶಾಭಂಗಗೊಂಡವರು.
   IV. ಕೆಲವು ಮಾದಕವಸ್ತು ವ್ಯಸನಿಗಳು ವಿಚಿತ್ರ ಮನೋಭಾವವುಳ್ಳವರು.

   (A) ಯಾವುದೂ ಅನುಸರಿಸುವುದಿಲ್ಲ (B) ಕೇವಲ I ಮತ್ತು II ಅನುಸರಿಸುತ್ತವೆ
   (C) ಕೇವಲ III ಮತ್ತು IV ಅನುಸರಿಸುತ್ತವೆ (D) ಕೇವಲ IV ಅನುಸರಿಸುತ್ತದೆ

4. ನಾಲ್ಕು ಸಮಾನಾಂತರ ರೇಖೆಗಳನ್ನು ಬೇರೆ ನಾಲ್ಕು ಸಮಾನಾಂತರ ರೇಖೆಗಳು ಛೇದಿಸುವುದರಿಂದ ಎಷ್ಟು ಸಮಾನಾಂತರ ರೇಖೆಗಳನ್ನು ರಚಿಸಬಹುದು ?
   (A) 18 (B) 24 (C) 32 (D) 36

5. ಒಬ್ಬ ವ್ಯಕ್ತಿಯು ಒಂದು ವಸ್ತುವನ್ನು 1,360 ರೂಪಾಯಿಗಳಿಗೆ ಮಾರಾಟ ಮಾಡಿದಾಗ 15% ನಷ್ಟವನ್ನು ಅನುಭವಿಸುತ್ತಾನೆ. ಅದೇ ವಸ್ತುವನ್ನು x ರೂಪಾಯಿಗಳಿಗೆ ಮಾರಾಟ ಮಾಡಿದ್ದಾದರೆ, 15% ಲಾಭವನ್ನು ಅನುಭವಿಸಬಹುದಿತ್ತು. ಕೆಳಗಿನವುಗಳಲ್ಲಿ ಸರಿಯಾದದ್ದು ಯಾವುದು ?
   (A) $1,700 < x < 1,750$ (B) $1,750 < x < 1,800$
   (C) $1,800 < x < 1,850$ (D) $1,850 < x < 1,900$

6. ಒಂದು ತುಂಡು ನೆಲಕ್ಕೆ ಪ್ರತಿ ಚದರಡಿಗೆ 50 ರೂಪಾಯಿ ಲೆಕ್ಕದಲ್ಲಿ ನೆಲಹಾಸಲು 30,000 ರೂಪಾಯಿಗಳು ಬೇಕು. ಆ ತುಂಡು ನೆಲದ ಉದ್ದ ಮತ್ತು ಅಗಲಗಳು 3 : 2 ಪ್ರಮಾಣದಲ್ಲಿದ್ದರೆ, ಪ್ರತಿ ಮೀಟರಿಗೆ 25 ರೂಪಾಯಿ ಲೆಕ್ಕದಲ್ಲಿ ಬೇಲಿ ಹಾಕುವ ವೆಚ್ಚವೆಷ್ಟು ?
   (A) ರೂ. 2,500 (B) ರೂ. 5,000
   (C) ರೂ. 10,000 (D) ರೂ. 15,000



Teachingninja.in

7. $x - \frac{1}{x} = 5$, ಆಗಿದ್ದರೆ, $x^2 + \frac{1}{x^2} = ?$

(A) 25 (B) 27 (C) 30 (D) 32

8. ಸಾಮಾನ್ಯ ರೀತಿಯಲ್ಲಿ 1 ರಿಂದ ಆರಂಭಿಸಿ ಪುಟಗಳಿಗೆ ಸಂಖ್ಯೆಯನ್ನು ನೀಡಿದಂತಹ ಒಂದು ಕಿರುಪುಸ್ತಕದ ಒಂದು ಪುಟವನ್ನು ಹರಿಯಲಾಗಿದೆ. ಉಳಿದ ಪುಟಗಳ ಸಂಖ್ಯೆಯ ಒಟ್ಟುಮೊತ್ತ 195 ಆಗಿದೆ. ಹರಿದ ಪುಟದ ಸಂಖ್ಯೆ ಈ ಕೆಳಗಿನವುಗಳಲ್ಲಿ ಯಾವುದು ?

(A) 5, 6 (B) 7, 8 (C) 9, 10 (D) 11, 12

9. "x" ಎಂಬ ಒಂದು ಕಂಪೆನಿಯು 1991ರಲ್ಲಿ ಗಳಿಸಿದ ಲಾಭವು 1993ರಲ್ಲಿ ಗಳಿಸಿದ ಲಾಭಕ್ಕಿಂತ ಹೆಚ್ಚು ಆದರೆ 1994ರಲ್ಲಿ ಗಳಿಸಿದ ಲಾಭಕ್ಕಿಂತ ಕಡಿಮೆ. ಅದೇ ಕಂಪನಿ 1994ರಲ್ಲಿ ಗಳಿಸಿದ ಲಾಭವು 1992ರಲ್ಲಿ ಗಳಿಸಿದ ಲಾಭಕ್ಕಿಂತ ಕಡಿಮೆ ಆದರೆ 1995ರಲ್ಲಿ ಗಳಿಸಿದ ಲಾಭಕ್ಕಿಂತ ಹೆಚ್ಚು. ಈ ಕೆಳಗಿನವುಗಳಲ್ಲಿ "x" ಕಂಪೆನಿಯು ಗರಿಷ್ಠ ಲಾಭವನ್ನು ಗಳಿಸಿದ ವರ್ಷ ಯಾವುದು ?

(A) 1995 (B) 1994 (C) 1993 (D) 1992

10. $7^{84}$ ನ್ನು 342 ರಿಂದ ಭಾಗಿಸಿದಾಗ ಉಳಿಯುವ ಶೇಷ

(A) 0 (B) 1 (C) 49 (D) 341

11. 6 ಸೆ.ಮೀ. ತ್ರಿಜ್ಯವುಳ್ಳ ವೃತ್ತದ ಕೇಂದ್ರದಿಂದ 8 ಸೆ.ಮೀ. ದೂರದಿಂದ ಬರೆದ ಸ್ಪರ್ಶರೇಖೆಯ ಉದ್ದ

(A) $\sqrt{5}$ ಸೆ.ಮೀ. (B) $2\sqrt{5}$ ಸೆ.ಮೀ. (C) 5 ಸೆ.ಮೀ. (D) $2\sqrt{7}$ ಸೆ.ಮೀ.

12. ಜಾನ್ಸನ್ ಎಂಬವನು ತನ್ನ ಕಾರಿನಲ್ಲಿ ಆಫೀಸಿಗೆ ಹೊರಟನು. ಉತ್ತರದಿಕ್ಕಿಗೆ 15 ಕಿ.ಮೀ. ಸಾಗಿದ ನಂತರ ಪಶ್ಚಿಮ ದಿಕ್ಕಿಗೆ 10 ಕಿ.ಮೀ. ಸಾಗಿದನು. ನಂತರ ಅವನು ದಕ್ಷಿಣಕ್ಕೆ ತಿರುಗಿ 5 ಕಿ.ಮೀ. ಸಾಗಿದನು. ನಂತರ ಪೂರ್ವ ದಿಕ್ಕಿಗೆ ತಿರುಗಿ 8 ಕಿ.ಮೀ. ಸಾಗಿದನು. ಕೊನೆಯದಾಗಿ ಅವನು ಬಲಕ್ಕೆ ತಿರುಗಿ 10 ಕಿ.ಮೀ. ಸಾಗಿದನು. ಅವನು ಆರಂಭದ ಹಂತದಿಂದ ಎಷ್ಟು ದೂರದಲ್ಲಿ ಮತ್ತು ಯಾವ ದಿಕ್ಕಿನಲ್ಲಿ ಇದ್ದಾನೆ ?

(A) 2 ಕಿ.ಮೀ., ಪಶ್ಚಿಮ (B) 5 ಕಿ.ಮೀ., ಪೂರ್ವ (C) 3 ಕಿ.ಮೀ., ಉತ್ತರ (D) 6 ಕಿ.ಮೀ., ದಕ್ಷಿಣ

13. ಮೂರು ಸಹೋದರರು ಚೆನ್ನೈ ಪಟ್ಟಣದ ಒಂದು ಫ್ಲಾಟ್‌ನಲ್ಲಿ ವಾಸಿಸುತ್ತಿದ್ದಾರೆ. ರವಿಯು ಬೆಳಿಗ್ಗೆ 8.00 ಗಂಟೆಗೆ ಮನೆಯನ್ನು ಬಿಟ್ಟು ಸಾಯಂಕಾಲ 6.00 ಗಂಟೆಗೆ ಹಿಂದಿರುಗುತ್ತಾನೆ. ಕುಮಾರ್ ಬೆಳಿಗ್ಗೆ 10.00 ಗಂಟೆಗೆ ಮನೆ ಬಿಟ್ಟು ರಾತ್ರಿ 11.00ಕ್ಕೆ ಹಿಂದಿರುಗುತ್ತಾನೆ ಮತ್ತು ಗೌತಮ್ ಸಾಯಂಕಾಲ 7.00ಕ್ಕೆ ಮನೆ ಬಿಟ್ಟು ಬೆಳಿಗ್ಗೆ 6.00ಕ್ಕೆ ಹಿಂದಿರುಗುತ್ತಾನೆ. ಮೂವರೂ ಸಹೋದರರು ಮನೆಯಲ್ಲಿ ಭೇಟಿಯಾಗಬಹುದಾದ ಕಾಲಮಾನ

(A) ಸಾಯಂಕಾಲ 6.00 ರಿಂದ 7.00 (B) ರಾತ್ರಿ 11.00 ರಿಂದ ಮಧ್ಯರಾತ್ರಿ 1.00

(C) ಬೆಳಿಗ್ಗೆ 6.00 ರಿಂದ 8.00 (D) ಬೆಳಿಗ್ಗೆ 8.00 ರಿಂದ ರಾತ್ರಿ 10.00

14. 'R + Q' ಎಂದರೆ Q ನ ತಂದೆ R, "R × Q" ಎಂದರೆ Q ನ ಸಹೋದರ R, "R – Q" ಎಂದರೆ Q ನ ಸಹೋದರಿ R, ಈ ಕೆಳಗಿನವುಗಳಲ್ಲಿ P ಯ ಆಂಟಿ N ಎಂದು ಸೂಚಿಸುವುದು ಯಾವುದು ?

(A) N × P – N (B) N – M + P (C) N – M × P (D) N × M – P



Teachingninja.in

15. ಒಬ್ಬ ವ್ಯಕ್ತಿಯು ಒಂದು ಕಾರನ್ನು ಖರೀದಿಸಿ 3,00,000 ರೂಪಾಯಿಗಳಿಗೆ ಮಾರುತ್ತಾನೆ. ಹೀಗೆ ಮಾಡುವಾಗ ಅವನು 20% ನಷ್ಟವನ್ನು ಅನುಭವಿಸಿದರೆ, ಆ ಕಾರನ್ನು ಅವನು ಎಷ್ಟು ರೂಪಾಯಿಗಳಿಗೆ ಖರೀದಿ ಮಾಡಿದ್ದನು ?

(A) ರೂ. 3,60,000 (B) ರೂ. 3,65,000 (C) ರೂ. 3,70,000 (D) ರೂ. 3,75,000

16. ನಿಲುಗಡೆಗಳನ್ನು ಹೊರತುಪಡಿಸಿ, ಒಂದು ಕಾರಿನ ವೇಗವು ಪ್ರತಿ ಗಂಟೆಗೆ 48 ಕಿ.ಮೀ. ಆಗಿದೆ. ನಿಲುಗಡೆಗಳನ್ನು ಪರಿಗಣಿಸಿದಾಗ, ಕಾರಿನ ವೇಗವು ಪ್ರತಿ ಗಂಟೆಗೆ 40 ಕಿ.ಮೀ. ಆಗಿದೆ. ಒಂದು ಗಂಟೆಯಲ್ಲಿ ಎಷ್ಟು ನಿಮಿಷಗಳ ಕಾಲ ಆ ಕಾರು ನಿಲ್ಲುತ್ತದೆ ?

(A) 5 ನಿಮಿಷ (B) 6 ನಿಮಿಷ (C) 10 ನಿಮಿಷ (D) 8 ನಿಮಿಷ

17. ಒಂದು ವೃತ್ತಾಕಾರದ ಶಂಕುವಿನ ಎತ್ತರವನ್ನು 200% ಹೆಚ್ಚಿಸಿ ಮತ್ತು ತಳಹದಿಯ ತ್ರಿಜ್ಯವನ್ನು 50% ರಷ್ಟು ಕಡಿತಗೊಳಿಸಿದಾಗ ಆ ಶಂಕುವಿನ ಘನಫಲವು

(A) ಹಾಗೆಯೇ ಉಳಿದುಕೊಳ್ಳುತ್ತದೆ

(B) 25% ಕಡಿಮೆಯಾಗುತ್ತದೆ

(C) 50% ಹೆಚ್ಚುತ್ತದೆ

(D) 25% ಹೆಚ್ಚುತ್ತದೆ

18. x ಮೌಲ್ಯವು 25 ಅಥವಾ ಅದಕ್ಕಿಂತ ಹೆಚ್ಚಾಗಿದ್ದು, y ಮೌಲ್ಯವು 40 ಅಥವಾ ಅದಕ್ಕಿಂತ ಕಡಿಮೆಯಾಗಿದ್ದರೆ, ಈ ಕೆಳಗಿನವುಗಳಲ್ಲಿ ಯಾವಾಗಲೂ ಸರಿಯಾಗಿರುವ ಹೇಳಿಕೆ ಯಾವುದು ?

(A) x ಮೌಲ್ಯವು y ಗಿಂತ ಹೆಚ್ಚಾಗಿರುತ್ತದೆ

(B) (y – x) ಮೌಲ್ಯವು 15 ಅಥವಾ ಅದಕ್ಕಿಂತ ಕಡಿಮೆಯಾಗಿರುತ್ತದೆ

(C) (y – x) ಮೌಲ್ಯವು 15 ಕ್ಕಿಂತ ಹೆಚ್ಚಾಗಿರುತ್ತದೆ

(D) (x – y) ಮೌಲ್ಯವು 65 ಅಥವಾ ಅದಕ್ಕಿಂತ ಹೆಚ್ಚಾಗಿರುತ್ತದೆ

19. 134, 132, 129, 124, 117, 106, 93, X ಈ ಶ್ರೇಣಿಯಲ್ಲಿ 'X' ಎಂದರೆಷ್ಟು?

(A) 74 (B) 75 (C) 76 (D) 77

20. ಒಂದು ವಿಷಯದಲ್ಲಿ 30 ವಿದ್ಯಾರ್ಥಿಗಳು ಪಡೆದ ಅಂಕಗಳ ಸರಾಸರಿ 70 ಆಗಿದೆ. ಹೆಚ್ಚು ಅಂಕಗಳನ್ನು ಪಡೆದ 10 ವಿದ್ಯಾರ್ಥಿಗಳ ಅಂಕಗಳ ಸರಾಸರಿ 80 ಮತ್ತು ಕಡಿಮೆ ಅಂಕಗಳನ್ನು ಪಡೆದ 10 ವಿದ್ಯಾರ್ಥಿಗಳ ಅಂಕಗಳ ಸರಾಸರಿ 60 ಆಗಿದೆ. ಹಾಗಾದರೆ ಉಳಿದ 10 ವಿದ್ಯಾರ್ಥಿಗಳು ಪಡೆದ ಅಂಕಗಳ ಸರಾಸರಿ

(A) 70 (B) 65 (C) 60 (D) 50

21. $\frac{23 * 23 + 17 * 17 + 2 * 23 * 17}{23 * 23 - 17 * 17}$ ಇದರ ಮೌಲ್ಯವೆಷ್ಟು?

(A) $\frac{40}{3}$ (B) $\frac{17}{23}$ (C) $\frac{23}{17}$ (D) $\frac{20}{3}$

22. A ಮತ್ತು B ಒಂದು ಕೆಲಸವನ್ನು 15 ಮತ್ತು 18 ದಿನಗಳಲ್ಲಿ ಕ್ರಮವಾಗಿ ಮುಗಿಸುತ್ತಾರೆ. A 10 ದಿನಗಳವರೆಗೆ ಕೆಲಸ ಮಾಡಿದ ನಂತರ B ಉಳಿದ ಕೆಲಸವನ್ನು ಮುಗಿಸಿದನು. ಉಳಿದ ಕೆಲಸವನ್ನು ಮುಗಿಸಲು B ಗೆ ಬೇಕಾದ ದಿನಗಳು ಎಷ್ಟು?

(A) 5 ದಿನಗಳು (B) 6 ದಿನಗಳು (C) 15 ದಿನಗಳು (D) 16 ದಿನಗಳು

23. 80ರ (75 ರ 25%) % = ?

(A) 15 (B) 20 (C) 60 (D) 80

Teachingninja.in

24. ಕೆಳಗಿನ ಪ್ರತಿಯೊಂದು ಆಯ್ಕೆಯಲ್ಲಿ ಮೂರು ಕೋನಗಳ ಅಳತೆಯನ್ನು ನೀಡಲಾಗಿದೆ. ಒಂದು ತ್ರಿಕೋನದ ಕೋನಗಳನ್ನು ಸಾಧಿಸುವ ನಿದರ್ಶನ ಯಾವುದು ?
(A) 59°, 72°, 61° (B) 45°, 61°, 73° (C) 30°, 125°, 20° (D) 63°, 37°, 80°

25. A ಮತ್ತು B ಎರಡು ಪಾತ್ರೆಗಳಲ್ಲಿ ಹಾಲು ಮತ್ತು ನೀರು ಕ್ರಮವಾಗಿ 7 : 1 ಮತ್ತು 9 : 7 ಪ್ರಮಾಣದಲ್ಲಿ ಇದೆ. ನಮಗೆ 2 : 1 ಪ್ರಮಾಣದಲ್ಲಿ ಪರಿಣಾಮಕ ಮಿಶ್ರಣ ಬೇಕಾದರೆ, ಎರಡೂ ಪಾತ್ರೆಗಳಿಂದ ತೆಗೆಯಬೇಕಾದ ಮಿಶ್ರಣಗಳ ಪ್ರಮಾಣ ಎಷ್ಟು?
(A) 1 : 1 (B) 1 : 2 (C) 2 : 1 (D) 3 : 1

26. ಒಂದು ಕಂಬದ ನೆರಳಿನ ಉದ್ದವು ಆ ಕಂಬದ ಉದ್ದದ $\sqrt{3}$ ಪಟ್ಟು ಆಗಿರುವಾಗ ಸೂರ್ಯನ ಉನ್ನತಿಯ ಕೋನ ಎಷ್ಟಾಗಿರುತ್ತದೆ ?
(A) 30° (B) 15° (C) 45° (D) 75°

27. ಒಂದು ಪರೀಕ್ಷೆಗೆ ಹಾಜರಾದ 130 ವಿದ್ಯಾರ್ಥಿಗಳಲ್ಲಿ, 52 ವಿದ್ಯಾರ್ಥಿಗಳು ಕನ್ನಡದಲ್ಲಿ ಅನುತ್ತೀರ್ಣರಾದರು, 72 ವಿದ್ಯಾರ್ಥಿಗಳು ಗಣಿತದಲ್ಲಿ ಅನುತ್ತೀರ್ಣರಾದರು ಮತ್ತು 34 ವಿದ್ಯಾರ್ಥಿಗಳು ಕನ್ನಡ ಮತ್ತು ಗಣಿತ ಎರಡರಲ್ಲಿಯೂ ಅನುತ್ತೀರ್ಣರಾದರು. ಹಾಗಾದರೆ ಉತ್ತೀರ್ಣರಾದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ
(A) 40 (B) 50 (C) 55 (D) 60

28. 180 : 90 ಸಂಖ್ಯೆಗಳ ಈ ಜೋಡಿಗೆ ಹೋಲುವ ಜೋಡಿಯನ್ನು ಕೆಳಗಿನ ಆಯ್ಕೆಗಳಿಂದ ಗುರುತಿಸಿ.
(A) 64 : 37 (B) 40 : 20 (C) 23 : 10 (D) 137 : 112

29. 600 ಕಿ. ಮೀ. ದೂರ ಹಾರಬೇಕಿದ್ದ ವಿಮಾನವೊಂದನ್ನು ಕೆಟ್ಟ ಹವಾಮಾನದಿಂದಾಗಿ ಅದರ ವೇಗವನ್ನು ಕಡಿಮೆಗೊಳಿಸಬೇಕಾಯಿತು. ಅದರ ಹಾರಾಟದ ಸರಾಸರಿ ವೇಗವನ್ನು ಪ್ರತಿ ಗಂಟೆಗೆ 200 ಕಿ.ಮೀ. ಕಡಿಮೆಗೊಳಿಸಲಾಯಿತು. ಮತ್ತು ಹಾರಾಟದ ಅವಧಿಯನ್ನು 30 ನಿಮಿಷಗಳಷ್ಟು ಹೆಚ್ಚಿಸಲಾಯಿತು. ಹಾಗಾದರೆ ಹಾರಾಟದ ಅವಧಿಯು
(A) 1 ಗಂಟೆ (B) 2 ಗಂಟೆಗಳು (C) 3 ಗಂಟೆಗಳು (D) 4 ಗಂಟೆಗಳು

30. ಪರಿಹರಿಸಲು ಅನುಕ್ರಮವಾಗಿ $1/2$, $1/3$ ಮತ್ತು $1/4$ ಸಾಧ್ಯತೆಯನ್ನು ಪ್ರತ್ಯೇಕವಾಗಿ ಹೊಂದಿರುವ ಮೂರು ವಿದ್ಯಾರ್ಥಿಗಳಿಗೆ ಒಂದು ಸಮಸ್ಯೆಯನ್ನು ನೀಡಲಾಗಿದೆ. ಆ ಸಮಸ್ಯೆಯು ಪರಿಹರಿಸಲ್ಪಡುವ ಸಂಭವನೀಯತೆ ಎಷ್ಟು?
(A) $1/4$ (B) $1/2$ (C) $3/4$ (D) $7/12$

31. ಈ ಕೆಳಗಿನವುಗಳಲ್ಲಿ ಅತೀ ದೊಡ್ಡ ಸಂಖ್ಯೆ ಯಾವುದು ?
(A) $(1/2)^{-6}$ (B) $(1/4)^{-3}$ (C) $(1/3)^{-4}$ (D) $(1/6)^{-2}$

32. ಒಬ್ಬ ವ್ಯಕ್ತಿಯು 8 ದಿನಗಳಲ್ಲಿ 20% ಕೆಲಸವನ್ನು ಮುಗಿಸುತ್ತಾನೆ ಮತ್ತು ಬೇರೊಬ್ಬ ವ್ಯಕ್ತಿ y ಅದೇ ಕೆಲಸವನ್ನು 6 ದಿನಗಳಲ್ಲಿ 25% ಮುಗಿಸುತ್ತಾನೆ. ಅವರಿಬ್ಬರೂ ಒಟ್ಟಿಗೆ ಕೆಲಸ ಮಾಡಿದರೆ, 40% ಕೆಲಸವನ್ನು ಮುಗಿಸಲು ಎಷ್ಟು ದಿನಗಳು ಬೇಕಾಗುತ್ತವೆ ?
(A) 6 (B) 8 (C) 10 (D) 12

33. ಕೆಳಗಿನ ಫಲಿತಾಂಶದ ಕೊನೆಯಲ್ಲಿ ಎಷ್ಟು ಶೂನ್ಯಗಳಿವೆ ?
1*5*10*15*20*25*30*35*40*45*50*55*60
(A) 10 (B) 12 (C) 14 (D) 15



Teachingninja.in

34. ಭೂಮಿಯ ಮೇಲಿನ ಒಂದು ಬಿಂದು P ನಿಂದ 10 ಮೀಟರ್ ಎತ್ತರದ ಕಟ್ಟಡವೊಂದರ ತುತ್ತತುದಿಯ ಕೋನ ಮತ್ತು ಅದೇ ಕಟ್ಟಡದ ಮೇಲೆ ಸ್ವಲ್ಪ ಎತ್ತರದಲ್ಲಿ ಹಾರುತ್ತಿರುವ ಹೆಲಿಕಾಪ್ಟರ್ ಒಂದರ ಕೋನಗಳು 30 ಮತ್ತು 60 ಡಿಗ್ರಿಗಳಾಗಿದೆ. ಭೂಮಿಯ ಮೇಲಿನಿಂದ ಆ ಹೆಲಿಕಾಪ್ಟರ್ ಎಷ್ಟು ಎತ್ತರದಲ್ಲಿದೆ ?

(A) $\frac{10}{\sqrt{3}}$ ಮೀ  (B) $10\sqrt{3}$ ಮೀ  (C) $\frac{20}{\sqrt{3}}$ ಮೀ  (D) 30 ಮೀ

35. tan4°.tan43°.tan47°.tan86° ಇದರ ಮೌಲ್ಯವೆಷ್ಟು ?

(A) 0  (B) 1  (C) $\sqrt{3}$  (D) $\frac{1}{\sqrt{3}}$

36. ರೇಖೀಯ ಸಮೀಕರಣಗಳ ಈ ವ್ಯವಸ್ಥೆಯನ್ನು ಗಮನಿಸಿ, $x_1 + 2x_2 + x_3 = 3$, $2x_1 + 3x_2 + x_3 = 3$, $3x_1 + 5x_2 + 2x_3 = 1$. ಈ ವ್ಯವಸ್ಥೆಯು ಹೊಂದಿರುವುದು

(A) ಅನಂತ ಸಂಖ್ಯೆಯ ಪರಿಹಾರಗಳು  (B) ಪರಿಹಾರವಿಲ್ಲ

(C) ಏಕಮಾತ್ರ ಪರಿಹಾರ  (D) ನಿಖರವಾಗಿ ಮೂರು ಪರಿಹಾರಗಳು

37. ಒಂದು ಚೀಲದಲ್ಲಿ 15 ಕೆಂಪು ಮತ್ತು 20 ಕಪ್ಪು ಚೆಂಡುಗಳಿವೆ. ಪ್ರತಿಯೊಂದು ಚೆಂಡಿಗೆ 1 ಅಥವಾ 2 ಅಥವಾ 3 ಎಂದು ಗುರುತು ಸಂಖ್ಯೆಯನ್ನು ನೀಡಲಾಗಿದೆ. 20% ಕೆಂಪು ಚೆಂಡುಗಳನ್ನು 1 ಮತ್ತು 40%ಕ್ಕೆ 3 ಎಂದು ಸಂಖ್ಯೆ ನೀಡಲಾಗಿದೆ. 45% ಕಪ್ಪು ಚೆಂಡುಗಳನ್ನು 2 ಮತ್ತು 30%ಕ್ಕೆ 3 ಎಂದು ಸಂಖ್ಯೆ ನೀಡಲಾಗಿದೆ. ಒಬ್ಬ ಹುಡುಗನು ಯಾದೃಚ್ಛಿಕವಾಗಿ ಒಂದು ಚೆಂಡನ್ನು ಚೀಲದಿಂದ ಹೊರತೆಗೆಯುತ್ತಾನೆ. ಆ ಚೆಂಡು ಕೆಂಪು ಬಣ್ಣದ್ದಾಗಿದ್ದು 3 ಎಂಬ ಗುರುತು ಸಂಖ್ಯೆಯನ್ನು ಹೊಂದಿದ್ದಲ್ಲಿ ಅಥವಾ ಕಪ್ಪು ಬಣ್ಣದ್ದಾಗಿದ್ದು 1 ಅಥವಾ 2 ಎಂಬ ಗುರುತು ಸಂಖ್ಯೆಯನ್ನು ಹೊಂದಿದ್ದಲ್ಲಿ ಅವನು ಗೆಲ್ಲುತ್ತಾನೆ. ಆ ಹುಡುಗನು ಗೆಲ್ಲುವ ಸಾಧ್ಯತೆ ಎಷ್ಟು ?

(A) $\frac{1}{2}$  (B) $\frac{5}{7}$  (C) $\frac{5}{9}$  (D) $\frac{4}{7}$

38. ಒಂದು ವೃತ್ತ ಹಾಗೂ ಚೌಕವು ಒಂದೇ ಪರಿಧಿಯನ್ನು ಹೊಂದಿವೆ. ಹೀಗಿರುವಾಗ,

(A) ಅವುಗಳ ವಿಸ್ತೀರ್ಣ ಸಮಾನವಾಗಿರುತ್ತದೆ  (B) ಚೌಕದ ವಿಸ್ತೀರ್ಣ ಹೆಚ್ಚು

(C) ವೃತ್ತದ ವಿಸ್ತೀರ್ಣ ಹೆಚ್ಚು  (D) ಮೇಲಿನ ಯಾವುದೂ ಅಲ್ಲ

39. 0.0875 ಇದರ $\frac{p}{q}$ ರೂಪ

(A) $\frac{7}{2^4 \times 5}$  (B) $\frac{7}{2 \times 5^4}$  (C) $\frac{7}{2^4 \times 5^4}$  (D) $\frac{5^3 \times 7}{2^3 \times 5^4}$

40. ಎರಡು ಸಮಾನವಾದ ತ್ರಿಕೋನಗಳ ಅನುಗುಣವಾದ ಬದಿಗಳು 4 : 9 ಅನುಪಾತ ಆಗಿದ್ದರೆ, ಈ ತ್ರಿಕೋನಗಳ ವಿಸ್ತೀರ್ಣದ ಅನುಪಾತವು

(A) 2 : 3  (B) 4 : 9  (C) 81 : 16  (D) 16 : 81



Teachingninja.in

41. 'SENSEX' ನಲ್ಲಿ ಏರಿಕೆ ಎಂದರೇನು ?
(A) ನ್ಯಾಶನಲ್ ಸ್ಟಾಕ್ ಎಕ್ಸ್‌ಚೇಂಜ್‌ನೊಂದಿಗೆ ದಾಖಲಾದ ಎಲ್ಲಾ ಕಂಪೆನಿಗಳ ಶೇರ್‌ಗಳ ಬೆಲೆ ಏರಿಕೆ
(B) ನ್ಯಾಶನಲ್ ಸ್ಟಾಕ್ ಎಕ್ಸ್‌ಚೇಂಜ್‌ನೊಂದಿಗೆ ದಾಖಲಾದ ಒಂದು ಸಮೂಹದ ಕಂಪೆನಿಗಳ ಶೇರ್‌ಗಳ ಬೆಲೆ ಏರಿಕೆ
(C) ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್‌ನೊಂದಿಗೆ ದಾಖಲಾದ ಒಂದು ಸಮೂಹದ ಕಂಪೆನಿಗಳ ಶೇರ್‌ಗಳ ಬೆಲೆಯಲ್ಲಿ ಆದ್ಯಂತ ಏರಿಕೆ
(D) ಬಾಂಬೆ ಸ್ಟಾಕ್ ಎಕ್ಸ್‌ಚೇಂಜ್‌ನೊಂದಿಗೆ ದಾಖಲಾದ ಒಂದು ಸಮೂಹದ ಕಂಪೆನಿಗಳ ಜೊತೆಗೆ ಎಲ್ಲಾ ಕಂಪೆನಿಗಳ ಶೇರ್‌ಗಳ ಬೆಲೆ ಏರಿಕೆ

42. ಕೆಳಗಿನವುಗಳಲ್ಲಿ 'ಬ್ಲಾಕ್ ಕಾರ್ಬನ್' ಕುರಿತು ಯಾವ ವಾಕ್ಯ ಸರಿಯಿಲ್ಲ?
(A) ಪಳೆಯುಳಿಕೆಯ ಇಂಧನಗಳು, ಜೈವಿಕ ಇಂಧನ ಮತ್ತು ಜೀವರಾಶಿಗಳ ಅಪೂರ್ಣ ದಹನದಿಂದ ಇದು ರಚನೆಯಾಗುತ್ತದೆ.
(B) ಬ್ಲಾಕ್ ಕಾರ್ಬನ್ ಎಂದರೆ ಇದು ಕಾರ್ಬನ್‌ನ ಅನಿಲ ರೂಪವಾಗಿದೆ.
(C) ಡೀಸಲ್ ನಿಷ್ಕಾಸ, ಜೀವರಾಶಿ ದಹನ – ಇವು ಬ್ಲಾಕ್ ಕಾರ್ಬನ್‌ನ ಕೆಲವು ಮೂಲಗಳಾಗಿವೆ.
(D) ಕ್ರಿಯೋಸ್ಫಿಯರ್‌ನ ಕರಗುವಿಕೆಯನ್ನು ಇದು ವೇಗವಾಗಿಸುತ್ತದೆ.

43. ಗೃಹಬಳಕೆಯ ವಿದ್ಯುತ್ ವೈರಿಂಗ್ ಮೂಲತಃ
(A) ಸರಣಿ ಸಂಪರ್ಕ
(B) ಸಮಾನಾಂತರ ಸಂಪರ್ಕ
(C) ಸರಣಿ ಮತ್ತು ಸಮಾನಾಂತರ ಸಂಪರ್ಕಗಳ ಸಂಯೋಜನೆ
(D) ಪ್ರತಿಯೊಂದು ಕೋಣೆಯೊಳಗೆ ಸರಣಿ ಸಂಪರ್ಕ ಮತ್ತು ಇತರೆಡೆಯಲ್ಲಿ ಸಮಾನಾಂತರ ಸಂಪರ್ಕ

44. ಒಂದು ವಾಶಿಂಗ್ ಮೆಶಿನ್‌ನ ಕಾರ್ಯಶೀಲ ಸಿದ್ಧಾಂತ
(A) ಸೆಂಟ್ರಿಫ್ಯೂಗೇಶನ್
(B) ಡಯಾಲಿಸಿಸ್
(C) ಹಿಂಪರಕ ಒಸ್ಮೋಸಿಸ್
(D) ಪ್ರಸರಣ

45. ಈ ಕೆಳಗಿನವುಗಳಲ್ಲಿ ಯಾವುದಕ್ಕೆ ಕ್ಯಾಪಿಲ್ಲಾರಿಟಿ ಕಾರಣವಾಗಿಲ್ಲ ?
(A) ಶಾಯಿಯ ಹೀರುವಿಕೆ
(B) ಭೂಗರ್ಭದ ನೀರಿನ ಏರಿಕೆ
(C) ಹತ್ತಿ ಬಟ್ಟೆಯ ಮೇಲೆ ಒಂದು ಹನಿ ನೀರಿನ ಹರಡುವಿಕೆ
(D) ಒಂದು ಗಿಡದ ಬೇರಿನಿಂದ ಅದರ ಎಲೆಗಳಿಗೆ ನೀರಿನ ಏರಿಕೆ

46. 2019ರ ಭಾರತ ರಾಜ್ಯದ ಅರಣ್ಯ ವರದಿಯ ಕುರಿತು ಕೆಳಗಿನ ಹೇಳಿಕೆಗಳನ್ನು ಗಮನಿಸಿ.
1. ಕರ್ನಾಟಕವು ಅರಣ್ಯ ಆವರಣದಲ್ಲಿ ಗರಿಷ್ಠ ಬೆಳವಣಿಗೆಯನ್ನು ಪ್ರದರ್ಶಿಸಿದೆ.
2. ಸಮಗ್ರ ಭೌಗೋಳಿಕ ಪ್ರದೇಶಕ್ಕೆ ಅನುಗುಣವಾಗಿ ಮಧ್ಯಪ್ರದೇಶವು ಗರಿಷ್ಠ ಮಟ್ಟದ ಅರಣ್ಯ ಆವರಣವನ್ನು ಹೊಂದಿದೆ.

ಮೇಲಿನ ಹೇಳಿಕೆಗಳಲ್ಲಿ ಸರಿಯಾದದ್ದು ಯಾವುದು/ವು ?
(A) ಕೇವಲ 1
(B) ಕೇವಲ 2
(C) 1 ಮತ್ತು 2 ಎರಡೂ
(D) ಯಾವುದೂ ಅಲ್ಲ


Teachingninja.in

47. "ಜೈವಿಕ ವೈವಿಧ್ಯತೆಯ ಸಮಾವೇಶ (CBD)"ದ ಕುರಿತು ಕೆಳಗಿನವುಗಳಲ್ಲಿ ಸರಿಯಾದದ್ದು ಯಾವುದು ?

(A) ಪರಿಸರ ಬದಲಾವಣೆಯ ಕುರಿತು ಅಂತರ್ ಸರಕಾರಿ ತಜ್ಞರ ಸಮಿತಿಯ ಮೂಲಕ CBD ಆಡಳಿತ ಕಾರ್ಯವನ್ನು ನಡೆಸುತ್ತದೆ

(B) ಸಂರಕ್ಷಿತ ಪ್ರದೇಶಗಳ ಹಸಿರು ಪಟ್ಟಿಯನ್ನು ಇದು ಪ್ರಕಟಿಸುತ್ತದೆ

(C) ಜೀವವೈವಿಧ್ಯತೆ ಮತ್ತು ಅದರ ಅಂಶಗಳ ಸಮರ್ಥನೀಯ ಬಳಕೆಯನ್ನು ಸಾಧಿಸುವುದು ಇದರ ಉದ್ದೇಶವಾಗಿದೆ

(D) ಹಸಿರುಮನೆ ಅನಿಲಗಳ ಹೊರಹಾಕುವಿಕೆಯಲ್ಲಿ ಇಳಿಕೆಯನ್ನು ಈ ತಜ್ಞರ ಸಮಿತಿಯು ಆಜ್ಞಾದೇಶಿಸಿದೆ

48. ಸಂರಕ್ಷಣೆಯ ಅಂತಾರಾಷ್ಟ್ರೀಯ ಒಕ್ಕೂಟ (IUCN) ಕುರಿತು ಕೆಳಗಿನ ಹೇಳಿಕೆಗಳನ್ನು ಗಮನಿಸಿ.

1. IUCN ಸರಕಾರಿ ಹಾಗೂ ನಾಗರಿಕ ಸಮಾಜ ಸಂಸ್ಥೆಗಳೆರಡರಿಂದಲೂ ರೂಪಿಸಲ್ಪಟ್ಟಿದ್ದಾಗಿದೆ.

2. ಅಪಾಯಕ್ಕೊಳಗಾದ ಜೀವಜಾತಿಗಳ ಕೆಂಪು ಪಟ್ಟಿಯನ್ನು ಈ ಸಂಸ್ಥೆಯು ಪ್ರಕಟಿಸುತ್ತದೆ.

ಮೇಲಿನ ಹೇಳಿಕೆಗಳಲ್ಲಿ ಸರಿಯಾದದ್ದು ಯಾವುದು/ವು ?

(A) ಕೇವಲ 1

(B) ಕೇವಲ 2

(C) 1 ಮತ್ತು 2 ಎರಡೂ

(D) ಯಾವುದೂ ಅಲ್ಲ

49. "ಸ್ವಚ್ಛ ಸಮುದ್ರಗಳ ಅಭಿಯಾನ"ದ ಕುರಿತು ಕೆಳಗಿನ ಹೇಳಿಕೆಗಳನ್ನು ಗಮನಿಸಿ.

1. ವಿಶ್ವ ಬ್ಯಾಂಕ್ ಸಹಕಾರದೊಂದಿಗೆ MoEFCC ನಿಂದ ಈ ಅಭಿಯಾನವು ಲಾಂಛಿಸಲ್ಪಟ್ಟಿದೆ.

2. 'ನೀಲಿ ಪತಾಕೆ ಯೋಜನೆ'ಯು ಸ್ವಚ್ಛ ಸಮುದ್ರಗಳ ಅಭಿಯಾನದ ಒಂದು ಭಾಗವಾಗಿದೆ.

ಮೇಲಿನ ಹೇಳಿಕೆಗಳಲ್ಲಿ ಸರಿಯಾದದ್ದು ಯಾವುದು/ವು ?

(A) ಕೇವಲ 1

(B) ಕೇವಲ 2

(C) 1 ಮತ್ತು 2 ಎರಡೂ

(D) ಯಾವುದೂ ಅಲ್ಲ

50. ಶೋಲಾಸ್ ಕುರಿತು ಕೆಳಗಿನ ಹೇಳಿಕೆಗಳನ್ನು ಗಮನಿಸಿ.

1. ಪಶ್ಚಿಮ ಹಾಗೂ ಪೂರ್ವ ಘಟ್ಟಗಳೆರಡಕ್ಕೂ ಶೋಲಾಸ್ ಸ್ಥಳೀಯವಾಗಿದೆ.

2. ನೀಲಗಿರಿ ತಾಹ್ರ್, ಶೋಲಾಸ್‌ನ ಪ್ರಮುಖ ಜಾತಿಯಾಗಿದೆ.

3. ಶೋಲಾಸನ್ನು ಬ್ಲ್ಯಾಕ್ ವ್ಯಾಟಲ್ಸ್, ಪೈನರ್ಸ್ ಮತ್ತು ನೀಲಗಿರಿಗಳು ಶೀಘ್ರವಾಗಿ ಬದಲಿಸುತ್ತವೆ.

ಮೇಲಿನ ಹೇಳಿಕೆಗಳಲ್ಲಿ ಸರಿಯಾದದ್ದು ಯಾವುದು/ವು ?

(A) ಕೇವಲ 2 ಮತ್ತು 3

(B) ಕೇವಲ 2

(C) ಕೇವಲ 1 ಮತ್ತು 3

(D) 1, 2 ಮತ್ತು 3



Teachingninja.in

51. 2020 ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅಳವಡಿಸಿಕೊಂಡ ದೇಶದ ಪ್ರಥಮ ರಾಜ್ಯ ಯಾವುದು ?
(A) ಗುಜರಾತ್
(B) ಕರ್ನಾಟಕ
(C) ಹಿಮಾಚಲಪ್ರದೇಶ
(D) ಮೇಲಿನ ಯಾವುದೂ ಅಲ್ಲ

52. UNESCO ದ ಸೃಜನಶೀಲ ನಗರಗಳ ಜಾಲದಲ್ಲಿ ಇತ್ತೀಚೆಗೆ ಸೇರಿಕೊಂಡ ಭಾರತದ ನಗರ ಯಾವುದು ?
(A) ಶ್ರೀನಗರ
(B) ವಾರಣಾಸಿ
(C) ಹೈದರಾಬಾದ್
(D) ಮೇಲಿನ ಯಾವುದೂ ಅಲ್ಲ

53. ಈ ಕೆಳಗಿನವರಲ್ಲಿ ನಂದ ಸಾಮ್ರಾಜ್ಯವನ್ನು ಸ್ಥಾಪಿಸಿದವರು ಯಾರು ?
(A) ಮಹಾಪದ್ಮ ನಂದ
(B) ಅಶೋಕ ನಂದ
(C) ಧನ ನಂದ
(D) ಮೇಲಿನ ಯಾರೂ ಅಲ್ಲ

54. ದಕ್ಷಿಣ ಆಫ್ರಿಕಾದಿಂದ ಗಾಂಧೀಜಿಯವರು ಭಾರತಕ್ಕೆ ಹಿಂದಿರುಗಿದ ವರ್ಷ
(A) 1915 (B) 1920 (C) 1910 (D) 1925

55. ಕೆಳಗಿನ ಯಾವ ಕಾರಣಗಳಿಂದ ರಾಷ್ಟ್ರಪತಿಯ ಕಚೇರಿಯ ಖಾಲಿ ಹುದ್ದೆ ಸಂಭವಿಸುತ್ತದೆ ?
1. ಅವರ ರಾಜೀನಾಮೆಯಿಂದ
2. ಗಂಭೀರವಾದ ಆಪಾದನೆಯ ಪ್ರಕ್ರಿಯೆಯಿಂದ ಅವರನ್ನು ತೆಗೆಯುವುದರಿಂದ
3. ಅವರ ಮರಣದಿಂದ
4. ಕಚೇರಿಯಲ್ಲಿರಲು ಅವರು ಯೋಗ್ಯತೆಯನ್ನು ಕಳೆದುಕೊಂಡಾಗ ಅಥವಾ ಅವರ ಚುನಾವಣೆಯು ಅಸಿಂಧು ಎಂದು ಘೋಷಿಸಲ್ಪಟ್ಟಾಗ.

(A) 1, 2 ಮತ್ತು 3 ಸರಿ
(B) 2, 3 ಮತ್ತು 4 ಸರಿ
(C) ಎಲ್ಲವೂ ಸರಿ
(D) 3 ಮತ್ತು 4 ಸರಿ

56. ಈ ಕೆಳಗಿನವುಗಳಲ್ಲಿ ಜಗತ್ತಿನಲ್ಲಿ ಅತ್ಯಂತ ದೊಡ್ಡ ಗುಮ್ಮಟದಲ್ಲಿ ಒಂದಾದ ಗುಮ್ಮಟವನ್ನು ಹೊಂದಿರುವ ಸ್ಮಾರಕ ಯಾವುದು ?
(A) ಶೇರ್ ಶಾಹ್‌ನ ಸಮಾಧಿ, ಸಸಾರಮ್
(B) ಜಾಮಾ ಮಸೀದಿ, ದೆಹಲಿ
(C) ಘಿಯಾಸ್–ಉದ್–ದಿನ್ ತುಘಲಕ್ ಸಮಾಧಿ, ದೆಹಲಿ
(D) ಗೋಲ್ ಗುಂಬಜ್, ಬಿಜಾಪುರ

57. ಈ ಕೆಳಗಿನವುಗಳಲ್ಲಿ ಯಾವುದು ಬೌದ್ಧ ಧರ್ಮ ಮತ್ತು ಜೈನ ಧರ್ಮಗಳಲ್ಲಿ ಸಾಮಾನ್ಯವಾಗಿದೆ ?
1. ಪ್ರಾಯಶ್ಚಿತ್ತ ಮತ್ತು ಸಂತೋಷಿಸುವ ವಿಷಯಗಳಲ್ಲಿ ತೀವ್ರತೆ ಕಡಿಮೆ ಮಾಡುವುದು
2. ವೇದಗಳ ಅಧಿಕಾರಗಳ ಕುರಿತು ತಾಟಸ್ಥ್ಯ
3. ಸಂಪ್ರದಾಯಗಳ ಪರಿಣಾಮಕಾರಿತ್ವದ ಕುರಿತು ನಿರಾಕರಣೆ
4. ಪ್ರಾಣಿಜೀವಗಳಿಗೆ ಹಾನಿಯನ್ನು ಒಡ್ಡದಿರುವುದು.

ಕೆಳಗೆ ನೀಡಿರುವ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

**ಸಂಕೇತಗಳು :**
(A) 1, 2, 3 ಮತ್ತು 4 (B) 2, 3 ಮತ್ತು 4 (C) 1, 3 ಮತ್ತು 4 (D) 1 ಮತ್ತು 2



Teachingninja.in

58. ಪಟ್ಟಿ – I ನ್ನು ಪಟ್ಟಿ – II ರೊಂದಿಗೆ ಸರಿಯಾಗಿ ಹೊಂದಿಸಿ ಮತ್ತು ಕೆಳಗೆ ನೀಡಿದ ಸಂಕೇತಗಳನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| ಪಟ್ಟಿ – I | ಪಟ್ಟಿ – II |
|---|---|
| a. ಅಭಿನವ್ ಭಾರತ್ ಸಮಾಜ | 1. ಶ್ರೀ ಅರೋಬಿಂದೋ ಘೋಷ್ |
| b. ಅನುಶೀಲನ್ ಸಮಿತಿ | 2. ಲಾಲಾ ಹರ್ದಯಾಲ್ |
| c. ಗದರ್ ಪಕ್ಷ | 3. ಸಿ. ಆರ್. ದಾಸ್ |
| d. ಸ್ವರಾಜ್ ಪಕ್ಷ | 4. ವಿ. ಡಿ. ಸಾವರ್ಕರ್ |

ಸಂಕೇತಗಳು :

| | a | b | c | d |
|---|---|---|---|---|
| (A) | 4 | 1 | 3 | 2 |
| (B) | 1 | 4 | 3 | 2 |
| (C) | 1 | 4 | 2 | 3 |
| (D) | 4 | 1 | 2 | 3 |

59. ಪಟ್ಟಿ – I ನ್ನು ಪಟ್ಟಿ – II ರೊಂದಿಗೆ ಸರಿಯಾಗಿ ಹೊಂದಿಸಿ ಮತ್ತು ಕೆಳಗೆ ನೀಡಿದ ಸಂಕೇತಗಳನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| ಪಟ್ಟಿ – I | ಪಟ್ಟಿ – II |
|---|---|
| a. ಮೋರ್ಲಿ ಮಿಂಟೊ ಸುಧಾರಣೆಗಳು | 1. ದೇಶಾದ್ಯಂತ ಆಂದೋಲನ |
| b. ಸೈಮನ್ ಸಮಿತಿ | 2. ಒಂದು ಚಳುವಳಿಯ ಹಿಂಪಡೆತ |
| c. ಚೌರಿ–ಚೌರ ಘಟನೆ | 3. ಸಮುದಾಯಿಕ ಮತದಾರರ ಮಂಡಳಿ |
| d. ದಂಡಿ ನಡಿಗೆ | 4. ಸಮುದಾಯಿಕ ಸ್ಫೋಟ |
| | 5. ಅಕ್ರಮವಾಗಿ ಉಪ್ಪನ್ನು ಉತ್ಪಾದಿಸುವುದು |

ಸಂಕೇತಗಳು :

| | a | b | c | d |
|---|---|---|---|---|
| (A) | 3 | 4 | 5 | 2 |
| (B) | 4 | 1 | 2 | 3 |
| (C) | 2 | 3 | 4 | 5 |
| (D) | 3 | 1 | 2 | 5 |



Teachingninja.in

60. ಪಟ್ಟಿ– I ನ್ನು (ಪ್ರಾಚೀನ ಪ್ರದೇಶ) ಪಟ್ಟಿ– IIರೊಂದಿಗೆ (ಪಳಮೆಯರಿಮೆ ಶೋಧನೆ) ಸರಿಯಾಗಿ ಹೊಂದಿಸಿ ಮತ್ತು ಕೆಳಗೆ ನೀಡಿದ ಸಂಕೇತಗಳನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| ಪಟ್ಟಿ– I (ಪ್ರಾಚೀನ ಪ್ರದೇಶ) | ಪಟ್ಟಿ– II (ಪಳಮೆಯರಿಮೆ ಶೋಧನೆ) |
|---|---|
| a. ಲೋಥಲ್ | 1. ಊಳಿದ ಗದ್ದೆ |
| b. ಕಲಿಬಂಗನ್ | 2. ಹಡಗುಕಟ್ಟೆ |
| c. ಧೋಲಾವೀರ | 3. ನೇಗಿಲಿನ ಟೆರಿಕೋಟಾ ಪ್ರತಿಕೃತಿ |
| d. ಬನವಾಲಿ | 4. ಹರಪ್ಪ ಲಿಪಿಯ ಹತ್ತು ದೊಡ್ಡ ಗಾತ್ರದ ಚಿಹ್ನೆಗಳನ್ನು ಹೊಂದಿರುವ ಒಂದು ಶಿಲಾಶಾಸನ |

ಸಂಕೇತಗಳು :

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 2 | 1 | 4 | 3 |
| (C) | 1 | 2 | 4 | 3 |
| (D) | 2 | 1 | 3 | 4 |

61. 'ಪಾವರ್ಟಿ ಆ್ಯಂಡ್ ಫೆಮೈನ್ಸ್' ಪುಸ್ತಕದ ಲೇಖಕರು

(A) ಅಮಾರ್ತ್ಯ ಸೇನ್
(B) ಬಿ. ಎಲ್. ರಾಯ್
(C) ವೆಂಕಟೇಶ್ ಎಮ್. ಎಮ್.
(D) ರವೀಂದ್ರನಾಥ ಠಾಗೋರ್

62. ಮಾನವರಲ್ಲಿ ಶಬ್ದವು ಎಲ್ಲಿಂದ ಹುಟ್ಟುತ್ತದೆ ?

(A) ಧ್ವನಿಪೆಟ್ಟಿಗೆ
(B) ಹೊಕ್ಕಳು
(C) ಅನ್ನನಾಳ
(D) ಮೇಲಿನ ಯಾವುದೂ ಅಲ್ಲ

63. ತನ್ನ ರಕ್ತದ ಗುಂಪನ್ನು ತಿಳಿಯದ ಒಬ್ಬ ವ್ಯಕ್ತಿಯು ಒಂದು ಭೀಕರ ಅಪಘಾತಕ್ಕೊಳಗಾಗುತ್ತಾನೆ ಹಾಗೂ ಆತನಿಗೆ ತಕ್ಷಣ ರಕ್ತದ ವರ್ಗಾವಣೆಯ ಆವಶ್ಯಕತೆಯಿರುತ್ತದೆ. ಕೆಳಗೆ ನೀಡಿರುವ ಯಾವ ರಕ್ತದ ಗುಂಪು ಆಸ್ಪತ್ರೆಯಲ್ಲಿ ಕೂಡಲೇ ದೊರೆಯುತ್ತದೆ ಹಾಗೂ ರಕ್ತದ ವರ್ಗಾವಣೆಗೆ ಸುರಕ್ಷಿತವಾಗಿರುತ್ತದೆ ?

(A) O, $Rh^-$
(B) O, $Rh^+$
(C) AB, $Rh^-$
(D) AB, $Rh^+$





Teachingninja.in

64. ''ಇಂಡಿಯಾ ಸ್ಟೇಟ್ ಆಫ್ ಫಾರೆಸ್ಟ್ ರಿಪೋರ್ಟ್''ಗೆ ಸಂಬಂಧಿಸಿದ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :
   1. ಕೃಷಿ ಸಂಶೋಧನೆಗೆ ಭಾರತೀಯ ಪರಿಷತ್ತು ಬಿಡುಗಡೆಗೊಳಿಸಿದ ದ್ವೈವಾರ್ಷಿಕ ಸಮೀಕ್ಷೆಯಾಗಿದೆ.
   2. ಇದು ಫಾರೆಸ್ಟ್ ಕವರ್ ಅಸೆಸ್‌ಮೆಂಟ್‌ನ ಕುರಿತು ರಾಷ್ಟ್ರ, ರಾಜ್ಯ ಹಾಗೂ ಜಿಲ್ಲಾಮಟ್ಟದ ಮಾಹಿತಿಯನ್ನು ಇದು ಹೊಂದಿದೆ.

   ಮೇಲಿನ ಯಾವ ಹೇಳಿಕೆ/ಗಳು ಸರಿಯಾಗಿದೆ ?
   (A) ಕೇವಲ 1
   (B) ಕೇವಲ 2
   (C) 1 ಮತ್ತು 2 ಎರಡೂ
   (D) ಮೇಲಿನ ಯಾವುದೂ ಅಲ್ಲ

65. ಕೆಳಗಿನವುಗಳಲ್ಲಿ ಮಾರ್ಪಡಿಸಲಾದ ಕಾಂಡ ಯಾವುದು ?
   (A) ಕ್ಯಾರೆಟ್   (B) ಸಿಹಿ ಗೆಣಸು   (C) ತೆಂಗಿನಕಾಯಿ   (D) ಬಟಾಟೆ

66. ಒಂದು ಟಿವಿ ರಿಮೋಟ್ ಕಂಟ್ರೋಲ್ ಯೂನಿಟ್ ಮೂಲಕ ಟಿವಿ ಸೆಟ್ ಕಾರ್ಯನಿರ್ವಹಣೆಗೆ ಈ ಕೆಳಗಿನವುಗಳಲ್ಲಿ ಯಾವುದು ಬಳಕೆಯಾಗುತ್ತದೆ ?
   (A) ಬೆಳಕಿನ ಅಲೆಗಳು   (B) ಶಬ್ದದ ಅಲೆಗಳು
   (C) ಮೈಕ್ರೋ ಅಲೆಗಳು   (D) ಇನ್ಫ್ರಾರೆಡ್ ಅಲೆಗಳು

67. ಮಾನವ ಶರೀರದಲ್ಲಿ ಆಕ್ಸಿಜನ್ ಸಾಗಣೆ ಯಾವುದರ ಮೂಲಕ ನಡೆಯುತ್ತದೆ ?
   1. ರಕ್ತ
   2. ಶ್ವಾಸಕೋಶಗಳು
   3. ಅಂಗಾಂಶಗಳು

   ಸಾಗಣೆಯ ಸರಿಯಾದ ಅನುಕ್ರಮ
   (A) 1, 2, 3   (B) 3, 1, 2   (C) 2, 3, 1   (D) 1, 3, 2

68. ಈ ಕೆಳಗಿನವರಲ್ಲಿ ತಮ್ಮ ಜೀವಕೋಶಗಳ DNA ಗಳಲ್ಲಿ ಶಾಶ್ವತವಾದ ಬದಲಾವಣೆಯನ್ನು ಅನುಭವಿಸುವ ಅಪಾಯವುಳ್ಳ ವೃತ್ತಿಪರರು ಯಾರು ?
   1. ಕಾರ್ಬನ್ 14 ಐಸೋಟೋಪ್‌ನ್ನು ಬಳಸುವ ಸಂಶೋಧಕರು
   2. ಎಕ್ಸ್-ರೇ ತಂತ್ರಜ್ಞರು
   3. ಕಲ್ಲಿದ್ದಲು ಗಣಿಗಾರರು
   4. ಬಣ್ಣಗಾರರು ಮತ್ತು ಪೈಂಟ್ ಮಾಡುವವರು

   ಕೆಳಗೆ ನೀಡಿದ ಸಂಕೇತದ ಮೂಲಕ ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.
   (A) ಕೇವಲ 2   (B) 1, 2 ಮತ್ತು 3
   (C) 1, 2 ಮತ್ತು 4   (D) 1, 3 ಮತ್ತು 4



[P.T.O.

Teachingninja.in

69. ಸಣ್ಣ ದೊಡ್ಡಬೆಕ್ಕುಗಳಾದ ಹುಲಿ, ಹಿಮ ಚಿರತೆ, ಮಚ್ಚೆ(ಕ್ಲೌಡೆಡ್) ಚಿರತೆ ಮತ್ತು ಸಾಮಾನ್ಯ ಚಿರತೆಯನ್ನು ಈ ಕೆಳಗಿನವುಗಳಲ್ಲಿ ಯಾವ ರಾಜ್ಯದ ನೈಸರ್ಗಿಕ ಆವಾಸಸ್ಥಾನದಲ್ಲಿ ಪಡೆಯಬಹುದು ?

(A) ಅರುಣಾಚಲ ಪ್ರದೇಶ
(B) ರಾಜಸ್ಥಾನ
(C) ಜಮ್ಮು ಮತ್ತು ಕಾಶ್ಮೀರ
(D) ಮೇಘಾಲಯ

70. ಪೆಟ್ ಕೋಕ್ ಕುರಿತು ಇರುವ ಈ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ ಮತ್ತು ಸರಿಯಾದ ಹೇಳಿಕೆಯನ್ನು ಗುರುತಿಸಿ :

1. ಕೋಕಿಂಗ್ ಕಲ್ಲಿದ್ದಲಿನ ಪರಿಷ್ಕರಣೆಯ ಮೂಲಕ ಪೆಟ್ ಕೋಕನ್ನು ಪಡೆಯಲಾಗುತ್ತದೆ.
2. ಪೆಟ್ರೋಲ್ ಅಥವಾ ಕಂಪ್ರೆಸ್ ಮಾಡಲ್ಪಟ್ಟ ನೈಸರ್ಗಿಕ ಅನಿಲಕ್ಕಿಂತ ಇದು ಕಡಿಮೆ ಮಾಲಿನ್ಯವನ್ನುಂಟು ಮಾಡುತ್ತದೆ.

(A) ಕೇವಲ 1
(B) ಕೇವಲ 2
(C) 1 ಮತ್ತು 2 ಎರಡೂ
(D) ಯಾವುದೂ ಅಲ್ಲ

71. ಈ ಕೆಳಗಿನವುಗಳಲ್ಲಿ ಅತೀ ಎತ್ತರದ ಪ್ರಸ್ಥಭೂಮಿ ಯಾವುದು ?

(A) ಮೆಕ್ಸಿಕೋದ ಪ್ರಸ್ಥಭೂಮಿ
(B) ಅಂಟಾರ್ಟಿಕದ ಪ್ರಸ್ಥಭೂಮಿ
(C) ಟಿಬೆಟ್‌ನ ಪ್ರಸ್ಥಭೂಮಿ
(D) ಮೇಲಿನ ಯಾವುದೂ ಅಲ್ಲ

72. ಮಿನಿ-ಸಂವಿಧಾನವೆಂದು ಯಾವ ತಿದ್ದುಪಡಿ ಕಾಯ್ದೆಯನ್ನು ಕರೆಯಲಾಗಿದೆ ?

(A) 42ನೆಯ ತಿದ್ದುಪಡಿ ಕಾಯ್ದೆ, 1976
(B) 41ನೆಯ ತಿದ್ದುಪಡಿ ಕಾಯ್ದೆ, 1976
(C) 44ನೆಯ ತಿದ್ದುಪಡಿ ಕಾಯ್ದೆ, 1976
(D) ಮೇಲಿನ ಯಾವುದೂ ಅಲ್ಲ

73. ಉಪರಾಷ್ಟ್ರಪತಿಯ ಕಾರ್ಯಗಳು ಯಾವುವು ?

1. ಅವರು ರಾಜ್ಯಸಭೆಯ ಪದನಿಮಿತ್ತ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುತ್ತಾರೆ.
2. ರಾಷ್ಟ್ರಪತಿಯ ಹುದ್ದೆ ಖಾಲಿಯಾದಲ್ಲಿ ಅವರು ರಾಷ್ಟ್ರಪತಿಯ ಕಾರ್ಯನಿರ್ವಹಿಸುತ್ತಾರೆ.
3. ರಾಷ್ಟ್ರಪತಿಯಾಗಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ರಾಷ್ಟ್ರಪತಿಯ ಕಾರ್ಯಗಳನ್ನು ನಿಭಾಯಿಸುತ್ತಿರುವಾಗ, ಉಪ-ರಾಷ್ಟ್ರಪತಿಯು ರಾಜ್ಯಸಭೆಯ ಅಧ್ಯಕ್ಷನ ಕಚೇರಿಯ ಕರ್ತವ್ಯಗಳನ್ನು ನಿಭಾಯಿಸುವುದಿಲ್ಲ.

(A) 1 ಮತ್ತು 2 ಸರಿ
(B) 1 ಮತ್ತು 3 ಸರಿ
(C) 2 ಮತ್ತು 3 ಸರಿ
(D) ಎಲ್ಲವೂ ಸರಿ

74. ನಮ್ಮ ಶರೀರದಲ್ಲಿ ಚರ್ಮದ ಪದರದ ಕೆಳಗೆ ಇರುವ ಕೊಬ್ಬಿನಾಂಶವು ಕೆಳಗಿನವುಗಳಲ್ಲಿ ಯಾವುದರ ವಿರುದ್ಧ ತಡೆಗೋಡೆಯಾಗಿ ಕಾರ್ಯನಿರ್ವಹಿಸುತ್ತದೆ ?

(A) ದೇಹದಿಂದ ಉಷ್ಣತೆಯ ನಷ್ಟ
(B) ದೇಹಕ್ಕೆ ಅಗತ್ಯವಾದ ದ್ರವಗಳ ನಷ್ಟ
(C) ದೇಹಕ್ಕೆ ಲವಣದ (salts) ನಷ್ಟ
(D) ಪರಿಸರದಿಂದ ಹಾನಿಕಾರಕ ಸೂಕ್ಷ್ಮಜೀವಿಗಳ ಒಳಪ್ರವೇಶ



Teachingninja.in

75. ಫ್ಲೋರೇಸೆಂಟ್ ಟ್ಯೂಬ್‌ಗಳು ಒಂದು ಚೋಕ್‌ನಿಂದ ಅಳವಡಿಸಿದೆ. ಚೋಕ್ ಕಾಯಿಲ್‌ವು

(A) ಲೈನ್ ವೋಲ್ಟೇಜನ್ನು ಇದು ಮೇಲೇರಿಸುತ್ತದೆ

(B) ಲೈನ್ ವೋಲ್ಟೇಜನ್ನು ಇದು ಕೆಳಗಿಳಿಸುತ್ತದೆ

(C) ಸರ್ಕ್ಯೂಟ್‌ನಲ್ಲಿ ಕರೆಂಟ್‌ನ್ನು ಕಡಿಮೆ ಮಾಡುತ್ತದೆ

(D) ಕಡಿಮೆ ಆವರ್ತನವುಳ್ಳ ಕರೆಂಟನ್ನು ವಿರೋಧಿಸುತ್ತದೆ (ಚೋಕ್)

76. ಪಟ್ಟಿ-I ನ್ನು (ನದಿಗಳು) ಪಟ್ಟಿ- II ರೊಂದಿಗೆ (ಅಣೆಕಟ್ಟುಗಳು) ಸರಿಯಾಗಿ ಹೊಂದಿಸಿ ಮತ್ತು ಕೆಳಗೆ ನೀಡಿದ ಸಂಕೇತಗಳನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ.

| ಪಟ್ಟಿ – I (ನದಿಗಳು) | ಪಟ್ಟಿ – II (ಅಣೆಕಟ್ಟುಗಳು) |
|---|---|
| a. ಕಾವೇರಿ | 1. ಆಲಮಟ್ಟಿ |
| b. ಕೃಷ್ಣಾ | 2. ಮೆಟ್ಟೂರ್ |
| c. ನರ್ಮದಾ | 3. ಗಾಂಧಿ ಸಾಗರ್ |
| d. ಚಂಬಲ್ | 4. ಸರ್ದಾರ್ ಸರೋವರ್ |

ಸಂಕೇತಗಳು :

| | a | b | c | d |
|---|---|---|---|---|
| (A) | 1 | 4 | 2 | 3 |
| (B) | 2 | 1 | 4 | 3 |
| (C) | 2 | 1 | 3 | 4 |
| (D) | 1 | 3 | 4 | 2 |

77. ಪಟ್ಟಿ-I ನ್ನು (ಭಾರತೀಯ ಸಂವಿಧಾನದ ವಿಷಯ) ಪಟ್ಟಿ- II ರೊಂದಿಗೆ (ಅದನ್ನು ಪಡೆದ ದೇಶ ) ಸರಿಯಾಗಿ ಹೊಂದಿಸಿ ಮತ್ತು ಕೆಳಗೆ ನೀಡಿದ ಸಂಕೇತಗಳನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ :

| ಪಟ್ಟಿ – I (ಭಾರತೀಯ ಸಂವಿಧಾನದ ವಿಷಯ) | ಪಟ್ಟಿ – II (ಅದನ್ನು ಪಡೆದ ದೇಶ ) |
|---|---|
| a. ರಾಜ್ಯ ನಿಯಮಾವಳಿಯ ನಿರ್ದೇಶನ ತತ್ವಗಳು | 1. ಆಸ್ಟ್ರೇಲಿಯಾ |
| b. ಮೂಲಭೂತ ಹಕ್ಕುಗಳು | 2. ಕೆನಡಾ |
| c. ಕೇಂದ್ರ-ರಾಜ್ಯ ಸಂಬಂಧಗಳಲ್ಲಿ ಏಕಕಾಲಿಕ ಪಟ್ಟಿ | 3. ಐರ್ಲ್ಯಾಂಡ್ |
| d. ಭಾರತವು ರಾಜ್ಯಗಳ ಒಕ್ಕೂಟವಾಗಿ ಕೇಂದ್ರವು ಹೆಚ್ಚಿನ ಅಧಿಕಾರಗಳನ್ನು ಹೊಂದಿಕೊಂಡಿರುವುದು | 4. ಯುನೈಟೆಡ್ ಕಿಂಗ್‌ಡಮ್ |
| | 5. ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕಾ |

ಸಂಕೇತಗಳು :

| | a | b | c | d |
|---|---|---|---|---|
| (A) | 5 | 4 | 1 | 2 |
| (B) | 3 | 5 | 2 | 1 |
| (C) | 5 | 4 | 2 | 1 |
| (D) | 3 | 5 | 1 | 2 |



Teachingninja.in

78. ಪಟ್ಟಿ–I ನ್ನು ಪಟ್ಟಿ–II ರೊಂದಿಗೆ ಸರಿಯಾಗಿ ಹೊಂದಿಸಿ ಮತ್ತು ಕೆಳಗೆ ನೀಡಿದ ಸಂಕೇತಗಳನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ :

| ಪಟ್ಟಿ – I | ಪಟ್ಟಿ – II |
|---|---|
| a. ಉತ್ಕರ್ಷ | 1. ಬೃಹತ್ ಮಟ್ಟದಲ್ಲಿ ಹೆಚ್ಚುವರಿ ಆದಾಯ, ಉತ್ಪಾದನೆ ಮತ್ತು ಉದ್ಯೋಗಾವಕಾಶಗಳನ್ನೊಳಗೊಂಡ ಉನ್ನತ ಮಟ್ಟದಲ್ಲಿ ವ್ಯಾಪಾರೋದ್ಯಮ ಚಟುವಟಿಕೆ |
| b. ಹಿಂಜರಿತ | 2. ಬೃಹತ್ ಮಟ್ಟದಲ್ಲಿ ಆದಾಯ, ಉತ್ಪಾದನೆ ಮತ್ತು ಉದ್ಯೋಗಾವಕಾಶಗಳಲ್ಲಿ ಹಂತಹಂತವಾದ ಕುಸಿತ |
| c. ಕುಸಿತ | 3. ಉದ್ಯೋಗಾವಕಾಶಗಳ ಕೊರತೆ ಮತ್ತು ನಿರುದ್ಯೋಗತೆಗಳ ಅಭೂತಪೂರ್ವ ಮಟ್ಟ ಹಾಗೂ ಆದಾಯ, ಉತ್ಪಾದನೆ ಮತ್ತು ಉದ್ಯೋಗಾವಕಾಶಗಳಲ್ಲಿ ತೀವ್ರವಾದ ಕುಸಿತ |
| d. ಚೇತರಿಕೆ | 4. ಬೆಲೆಗಳು, ಆದಾಯ, ಉತ್ಪಾದನೆ ಮತ್ತು ಉದ್ಯೋಗಾವಕಾಶಗಳ ಸಾಮಾನ್ಯ ಮಟ್ಟದಲ್ಲಿ ಕ್ರಮಬದ್ಧವಾದ ಏರಿಕೆ |

ಸಂಕೇತಗಳು :

| | a | b | c | d |
|---|---|---|---|---|
| (A) | 1 | 2 | 3 | 4 |
| (B) | 1 | 2 | 4 | 3 |
| (C) | 2 | 1 | 4 | 3 |
| (D) | 2 | 1 | 3 | 4 |

79. ಪಟ್ಟಿ – I ನ್ನು ಪಟ್ಟಿ–II ರೊಂದಿಗೆ ಸರಿಯಾಗಿ ಹೊಂದಿಸಿ ಮತ್ತು ಕೆಳಗೆ ನೀಡಿದ ಸಂಕೇತಗಳನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ :

| ಪಟ್ಟಿ – I | ಪಟ್ಟಿ – II |
|---|---|
| a. ಬ್ಲೂ ವಿಟ್ರಿಯೋಲ್ | 1. ಸೋಡಿಯಮ್ ಬೈಕಾರ್ಬೋನೇಟ್ |
| b. ಎಪ್ಸಮ್ ಸಾಲ್ಟ್ | 2. ಸೋಡಿಯಮ್ ಹೈಡ್ರಾಕ್ಸೈಡ್ |
| c. ಬೇಕಿಂಗ್ (ಅಡುಗೆ) ಸೋಡಾ | 3. ಮೆಗ್ನೀಶಿಯಮ್ ಸಲ್ಫೇಟ್ |
| d. ಕಾಸ್ಟಿಕ್ ಸೋಡಾ | 4. ಕಾಪರ್ ಸಲ್ಫೇಟ್ |

ಸಂಕೇತಗಳು :

| | a | b | c | d |
|---|---|---|---|---|
| (A) | 3 | 4 | 2 | 1 |
| (B) | 4 | 3 | 2 | 1 |
| (C) | 3 | 4 | 1 | 2 |
| (D) | 4 | 3 | 1 | 2 |



Teachingninja.in

80. ಜಗತ್ತಿನ ಅತೀ ಉದ್ದದ ದ್ವಿಪಥ ರಸ್ತೆ ಸುರಂಗ ಮಾರ್ಗವಾದ ಸೇಲಾ ಸುರಂಗ ಮಾರ್ಗ ಯಾವ ರಾಜ್ಯದಲ್ಲಿದೆ ?

(A) ನಾಗಾಲ್ಯಾಂಡ್

(B) ಅರುಣಾಚಲ ಪ್ರದೇಶ

(C) ಉತ್ತರಾಖಂಡ

(D) ಮೇಲಿನ ಯಾವುದೂ ಅಲ್ಲ

81. ಮೈಕ್ರೋಪ್ಲಾಸ್ಟಿಕ್‌ಗಳ ಕುರಿತು ಕೆಳಗಿನ ಹೇಳಿಕೆಗಳನ್ನು ಗಮನಿಸಿ :

1. 5 ನ್ಯಾನೋಮೀಟರ್‌ಗಿಂತ ಕಡಿಮೆ ಉದ್ದದ ಪ್ಲಾಸ್ಟಿಕ್ ಅವಶೇಷಗಳನ್ನು ಮೈಕ್ರೋ ಪ್ಲಾಸ್ಟಿಕ್‌ಗಳೆಂದು ಕರೆಯುತ್ತಾರೆ.
2. ಮೈಕ್ರೋಬೀಡ್ಸ್ ಆರೋಗ್ಯ ಹಾಗೂ ಸೌಂದರ್ಯವರ್ಧಕ ಉತ್ಪನ್ನಗಳಲ್ಲಿ ಎಕ್ಸ್‌ಫೋಲಿಯೆಂಟ್ಸ್‌ಗಳಾಗಿ ಸೇರಿಸಲಾಗುತ್ತದೆ.
3. ಇತ್ತೀಚಿನ ಅಧ್ಯಯನದಲ್ಲಿ, ಹೆಚ್ಚಿನ ನೀರಿನ ಬಾಟಲಿಗಳಲ್ಲಿ ಮೈಕ್ರೋಪ್ಲಾಸ್ಟಿಕ್‌ಗಳ ಮಾಲಿನ್ಯವನ್ನು ಖಚಿತಪಡಿಸಲಾಗಿದೆ.

ಮೇಲಿನ ಯಾವ ಹೇಳಿಕೆ ಸರಿಯಾಗಿದೆ ?

(A) ಕೇವಲ 1 ಮತ್ತು 2

(B) ಕೇವಲ 2 ಮತ್ತು 3

(C) ಕೇವಲ 1 ಮತ್ತು 3

(D) 1, 2 ಮತ್ತು 3

82. ಅಂತರರಾಷ್ಟ್ರೀಯ ಸ್ಪೇಸ್ ಸ್ಟೇಶನ್ (ISS) ಚಟುವಟಿಕೆಯು ಒಂದು ಜಂಟಿ ಯೋಜನೆಯಾಗಿದೆ ಮತ್ತು ಇದನ್ನು ಕೆಳಗಿನ ಯಾವ ರಾಷ್ಟ್ರಗಳು ನಡೆಸಿಕೊಡುತ್ತಿವೆ ?

1. ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ
2. ರಷ್ಯಾ
3. ಜಪಾನ್
4. ಕೆನಡಾ
5. ಚೀನಾ
6. ಭಾರತ

ಮೇಲಿನ ಯಾವ ಹೇಳಿಕೆ ಸರಿಯಾಗಿದೆ ?

(A) ಕೇವಲ 1, 2, 3 ಮತ್ತು 4

(B) ಕೇವಲ 1, 3, 4 ಮತ್ತು 5

(C) ಕೇವಲ 1, 4, 5 ಮತ್ತು 6

(D) ಕೇವಲ 1, 2, 4 ಮತ್ತು 5

83. ಯುನೈಟೆಡ್ ನೇಶನ್‌ಗಳ ಪರಿಸರ ಯೋಜನೆಯ (UNEP) ಕುರಿತು ಕೆಳಗಿನ ಹೇಳಿಕೆಗಳನ್ನು ಗಮನಿಸಿ :

1. ರಿಯೋ ಅರ್ತ್ ಸಮಿಟ್ ಸಂದರ್ಭದಲ್ಲಿ UNEP ಯನ್ನು ಸ್ಥಾಪಿಸಲಾಯಿತು.
2. ಜಾಗತಿಕ ಪರಿಸರ ಸೌಲಭ್ಯಕ್ಕೆ ಇದೊಂದು ಅನುಷ್ಠಾನಗೊಳಿಸುವಿಕೆಯ ಸಂಸ್ಥೆಯಾಗಿದೆ.

ಮೇಲಿನ ಹೇಳಿಕೆಗಳಲ್ಲಿ ಯಾವುದು ಸರಿಯಾಗಿದೆ ?

(A) ಕೇವಲ 1

(B) ಕೇವಲ 2

(C) 1 ಮತ್ತು 2 ಎರಡೂ

(D) 1 ಮತ್ತು 2 ಎರಡೂ ಅಲ್ಲ



Teachingninja.in

84. 'ಪರಿಸರ ಪಿರಮಿಡ್'ನ ಕುರಿತು ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ ?

1. ಶಕ್ತಿಯ ಪಿರಮಿಡ್ ಎಂದಿಗೂ ನೆಟ್ಟಗೆ ಇರುತ್ತದೆ.

2. ಸಂಖ್ಯೆಗಳ ಪಿರಮಿಡ್ ಕೇವಲ ಜಲವಾಸಿ ಪರಿಸರ ವ್ಯವಸ್ಥೆಯಲ್ಲಿ ತಲೆಕೆಳಗಾಗಿದೆ.

ಕೆಳಗೆ ಕೊಟ್ಟಿರುವ ಸಂಕೇತಗಳನ್ನು ಬಳಸಿ ಸರಿಯಾದ ಉತ್ತರವನ್ನು ಆರಿಸಿ :

(A) ಕೇವಲ 1
(B) ಕೇವಲ 2
(C) 1 ಮತ್ತು 2 ಎರಡೂ
(D) 1 ಮತ್ತು 2 ಎರಡೂ ಅಲ್ಲ

85. ಭೂಮಿಯ ಅತ್ಯಂತ ಹೊರಗಿನ ಪದರವನ್ನು ಏನೆಂದು ಕರೆಯುತ್ತಾರೆ ?

(A) ಕ್ರಸ್ಟ್
(B) ಮ್ಯಾಂಟೆಲ್
(C) ಕೋರ್
(D) ಮೇಲಿನ ಯಾವುದೂ ಅಲ್ಲ

86. ಜೌಗು ಪ್ರದೇಶಗಳಲ್ಲಿ ನೀರಿನ ಹಯಸಿಂತ್‌ಗಳು ಬೆಳೆಯುವುದರಿಂದ ಈ ಕೆಳಗಿನವುಗಳಲ್ಲಿ ಯಾವುದು ಉಂಟಾಗಬಹುದು ?

1. ಜಲಸಂಬಂಧದ ಜೀವವೈವಿಧ್ಯತೆಯಲ್ಲಿ ನಿಖರವಾದ ಪೆಚ್ಚಳ ಉಂಟಾಗುತ್ತದೆ.

2. ಜೈವಿಕ ಆಮ್ಲಜನಕದ ಬೇಡಿಕೆಯು ಹೆಚ್ಚಬಹುದು.

3. ಜಲಸಂಬಂಧದ ಪರಿಸರ ವ್ಯವಸ್ಥೆಯ ಸೌಂದರ್ಯದ ಸ್ವರೂಪವು ಉತ್ತಮವಾಗುತ್ತದೆ.

ಮೇಲಿನವುಗಳಲ್ಲಿ ಸರಿಯಾದ ಹೇಳಿಕೆ/ಗಳು ಯಾವುವು ?

(A) ಕೇವಲ 2 ಮತ್ತು 3
(B) ಕೇವಲ 2
(C) ಕೇವಲ 1 ಮತ್ತು 3
(D) 1, 2 ಮತ್ತು 3

87. ಗುರುತು ಹಾಕುವ (ECOMARK) ಕಾರ್ಯಯೋಜನೆ ಕುರಿತು ಕೆಳಗೆ ನೀಡಲ್ಪಟ್ಟ ಹೇಳಿಕೆಗಳನ್ನು ಗಮನಿಸಿ.

1. ಪರಿಸರ, ಅರಣ್ಯ ಮತ್ತು ವಾತಾವರಣ ಬದಲಾವಣೆಯ ಸಚಿವಾಲಯದಿಂದ ಈ ಕಾರ್ಯಯೋಜನೆಯನ್ನು ಜಾರಿಗೊಳಿಸಲಾಗಿದೆ.

2. ಭಾರತೀಯ ಗುಣಮಟ್ಟಗಳ ಕಾರ್ಯಾಲಯವು ಉತ್ಪಾದನೆಯನ್ನು ಮೌಲ್ಯೀಕರಿಸಿ ಪ್ರಮಾಣೀಕರಿಸುತ್ತದೆ.

3. ECOMARK ಕಾರ್ಯಯೋಜನೆಯಲ್ಲಿ ಉತ್ಪನ್ನಗಳ ಮರುಬಳಕೆಯನ್ನು ಪರಿಗಣಿಸಲಾಗುವುದಿಲ್ಲ.

ಮೇಲಿನವುಗಳಲ್ಲಿ ಸರಿಯಾದ ಹೇಳಿಕೆ/ಗಳು ಯಾವುವು ?

(A) ಕೇವಲ 1 ಮತ್ತು 2
(B) ಕೇವಲ 1 ಮತ್ತು 3
(C) ಕೇವಲ 1
(D) 1, 2 ಮತ್ತು 3



Teachingninja.in

88. ಭಾರತದಲ್ಲಿ ಪೆಟ್ರೋಲ್‌ನೊಂದಿಗೆ ಮಿಥೆನಾಲ್ ಮಿಶ್ರಣ ಮಾಡುವುದರ ಕುರಿತು ಕೆಳಗಿನ ಹೇಳಿಕೆಗಳನ್ನು ಗಮನಿಸಿ.

1. ಪೆಟ್ರೋಲ್‌ನೊಂದಿಗೆ ಮಿಥೆನಾಲ್ ಮಿಶ್ರಣ ಮಾಡುವುದರಿಂದ ಇಂಧನದ ಬೆಲೆ ಕಡಿಮೆಯಾಗುತ್ತದೆ.
2. ಆಂತರಿಕ ದಹನಕಾರಿ ಇಂಜಿನ್‌ಗಳಲ್ಲಿ ಮಿಥೆನಾಲ್ ಪರಿಣಾಮಕಾರಿಯಾಗಿ ಉರಿಯುವ ಮೂಲಕ ಯಾವುದೇ ಕಣವನ್ನು ಮತ್ತು ಮಸಿಯನ್ನುಂಟು ಮಾಡುವುದಿಲ್ಲ.
3. ನೈಸರ್ಗಿಕ ಅನಿಲ ಮತ್ತು ಕಲ್ಲಿದ್ದಲಿನಿಂದ ಮಿಥೆನಾಲ್‌ನ್ನು ದೇಶೀಯವಾಗಿ ಉತ್ಪಾದಿಸಬಹುದು.

ಮೇಲಿರುವ ಹೇಳಿಕೆಗಳಲ್ಲಿ ಸರಿಯಾದದ್ದು ಯಾವುದು/ವು ?

(A) ಕೇವಲ 1 ಮತ್ತು 2
(B) ಕೇವಲ 2 ಮತ್ತು 3
(C) ಕೇವಲ 1 ಮತ್ತು 3
(D) 1, 2 ಮತ್ತು 3

89. ನೈಟ್ರೋಜನ್ ಮಾಲಿನ್ಯದ ಕುರಿತು ಕೆಳಗಿನ ಹೇಳಿಕೆಗಳನ್ನು ಗಮನಿಸಿ.

1. ಭಾರತದಲ್ಲಿ ನೈಟ್ರೋಜನ್ ಮಾಲಿನ್ಯಕ್ಕೆ ಮೂಲ ಕಾರಣ ಕೃಷಿ.
2. $NO_x$ (ನೈಟ್ರೋಜನ್ ಆಕ್ಸೈಡ್) ನೆಲಮಟ್ಟದಲ್ಲಿ ಓಜೋನ್ ಉತ್ಪಾದನೆಯನ್ನು ಪ್ರಭಾವಿಸುತ್ತದೆ.
3. ನೈಟ್ರಸ್ ಆಕ್ಸೈಡ್ ಮೀಥೇನ್‌ಗಿಂತ ಕಡಿಮೆ ಜಾಗತಿಕ ತಾಪಮಾನ ಏರಿಕೆಯ ಸಂಭಾವ್ಯತೆಯನ್ನು ಹೊಂದಿದೆ.

ಮೇಲಿನ ಹೇಳಿಕೆಗಳಲ್ಲಿ ಸರಿಯಾದದ್ದು ಯಾವುದು/ವು ?

(A) ಕೇವಲ 1 ಮತ್ತು 2
(B) ಕೇವಲ 2 ಮತ್ತು 3
(C) ಕೇವಲ 1 ಮತ್ತು 3
(D) 1, 2 ಮತ್ತು 3

90. ರಾಷ್ಟ್ರೀಯ ಬಿದಿರು ಮಿಷನ್‌ಗೆ ಸಂಬಂಧಿಸಿದ ಕೆಳಗಿನ ಹೇಳಿಕೆಗಳನ್ನು ಗಮನಿಸಿ.

1. ಪ್ರದೇಶಗಳನ್ನು ಆಧರಿಸಿದ, ಪ್ರಾದೇಶಿಕವಾಗಿ ವಿಭಿನ್ನ ಕಾರ್ಯವಿಧಾನವನ್ನು ಅಳವಡಿಸಿಕೊಂಡು ಬಿದಿರು ವಲಯದ ಸಮಗ್ರ ಬೆಳವಣಿಗೆಯನ್ನು ಈ ಮಿಷನ್ ಚಿತ್ರಿಸಿಕೊಂಡಿದೆ.
2. ಕೃಷಿ ಮತ್ತು ರೈತರ ಯೋಗಕ್ಷೇಮದ ಸಚಿವಾಲಯದಿಂದ ಈ ಮಿಷನ್ ಕಾರ್ಯಗತವಾಗುತ್ತಿದೆ.
3. ಸಾಮಾಜಿಕ, ವಾಣಿಜ್ಯ ಮತ್ತು ಆರ್ಥಿಕ ಪ್ರಯೋಜನಗಳುಳ್ಳ ಕೇವಲ ಈಶಾನ್ಯ ರಾಜ್ಯಗಳಲ್ಲಿ ಬಿದಿರಿನ ಅಭಿವೃದ್ಧಿಯ ಕುರಿತು ಈ ಮಿಷನ್ ಗಮನಹರಿಸಲಿದೆ.

ಮೇಲಿನ ಹೇಳಿಕೆಗಳಲ್ಲಿ ಸರಿಯಾದದ್ದು ಯಾವುದು/ವು ?

(A) ಕೇವಲ 1
(B) ಕೇವಲ 1 ಮತ್ತು 2
(C) ಕೇವಲ 1 ಮತ್ತು 3
(D) 1, 2 ಮತ್ತು 3

91. ಆಗಿನ ವೇಣುಗೋಪಾಲ ವನ್ಯಜೀವಿ ಉದ್ಯಾನದ ಹೆಚ್ಚಿನ ಅರಣ್ಯ ಪ್ರದೇಶಗಳನ್ನು ಸೇರಿಸಿಕೊಂಡು ಈ ರಾಷ್ಟ್ರೀಯ ಉದ್ಯಾನವನ್ನು ರಚಿಸಲಾಗಿತ್ತು. ಈ ಅಭಯಾರಣ್ಯವನ್ನು ಹುಲಿ ಯೋಜನೆ (ಪ್ರಾಜೆಕ್ಟ್ ಟೈಗರ್) ಅಡಿಯಲ್ಲಿ 1973ರಲ್ಲಿ ಸೇರಿಸಿಕೊಳ್ಳಲಾಯಿತು. ಈ ಕೆಳಗಿನ ಯಾವ ರಾಷ್ಟ್ರೀಯ ಉದ್ಯಾನವನ್ನು ಉಲ್ಲೇಖಿಸಲಾಗಿದೆ ?

(A) ನಾಗರಹೊಳೆ ಹುಲಿ ಅಭಯಾರಣ್ಯ
(B) ಬಂಡೀಪುರ ಹುಲಿ ಅಭಯಾರಣ್ಯ
(C) ಭದ್ರಾ ಹುಲಿ ಅಭಯಾರಣ್ಯ
(D) ಕಾಳಿ ಹುಲಿ ಅಭಯಾರಣ್ಯ



Teachingninja.in

92. ಏರ್‌-ಕಂಡೀಶನರ್‌ಗಳು ನೀರನ್ನು ಏಕೆ ವಿಸರ್ಜಿಸುತ್ತವೆ ?

(A) ವೋಲ್ಟೇಜ್ ಏರುಪೇರು ಏರ್‌-ಕಂಡೀಶನರ್ ಅಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಮಾಡುತ್ತದೆ

(B) ಏರ್‌-ಕಂಡೀಶನರ್ ಒಳಗೆ ಹೋಗುತ್ತಿರುವ ಗಾಳಿಯ ಘನೀಕರಣದಿಂದಾಗಿ

(C) ಏರ್‌-ಕಂಡೀಶನರ್ ಒಳಗೆ ಹೋಗುತ್ತಿರುವ ಕಳಪೆ ಗುಣಮಟ್ಟದ ಗಾಳಿಯಿಂದಾಗಿ

(D) ಇದನ್ನು ಅತೀ ಕಳಪೆ-ಗುಣಮಟ್ಟದ ಏರ್‌-ಕಂಡೀಶನರ್‌ಗಳಲ್ಲಿ ಮುಖ್ಯವಾಗಿ ಕಾಣಬಹುದು, ಇವುಗಳು ವಿಶ್ವಾಸಾರ್ಹ ಗುಣಮಟ್ಟದ ಪರಿಶೀಲನೆಗಳನ್ನು ಹೊಂದಿರುವುದಿಲ್ಲ ಅಥವಾ ಏರ್‌-ಕಂಡೀಶನರ್ ಹಳೆಯದಾದಾಗ ಹೀಗಾಗುತ್ತದೆ

93. ಜಗತ್ತಿನ ಅತೀ ದೊಡ್ಡ ಕ್ರಿಕೆಟ್ ಸ್ಟೇಡಿಯಮ್ ಆದ ನರೇಂದ್ರ ಮೋದಿ ಸ್ಟೇಡಿಯಮ್ ಎಲ್ಲಿದೆ ?

(A) ಅಹ್ಮದಾಬಾದ್, ಗುಜರಾತ್

(B) ಬೆಂಗಳೂರು, ಕರ್ನಾಟಕ

(C) ಚೆನ್ನೈ, ತಮಿಳುನಾಡು

(D) ಮೇಲಿನ ಯಾವುದೂ ಅಲ್ಲ

94. ಕೆಳಗಿನವರಲ್ಲಿ ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಪ್ರಶಸ್ತಿಯನ್ನು ಪಡೆದ ಭಾರತದ ಪ್ರಥಮ ಫುಟ್‌ಬಾಲ್ ಆಟಗಾರ ಯಾರು ?

(A) ಸಂದೇಶ್ ಝಿಂಗನ್

(B) ಗುರುಪ್ರೀತ್ ಸಿಂಗ್ ಸಂಧು

(C) ಸುನಿಲ್ ಚೆಟ್ರಿ

(D) ಮೇಲಿನ ಯಾರೂ ಅಲ್ಲ

95. 1798 ರಲ್ಲಿ ಸಿಡುಬು ರೋಗಕ್ಕೆ ಲಸಿಕೆಯನ್ನು ಕಂಡುಹುಡುಕಿದವರು ಯಾರು ?

(A) ಎಡ್ವರ್ಡ್ ಜೆನ್ನರ್

(B) ಅಲೆಕ್ಸಾಂಡರ್ ಫ್ಲೆಮಿಂಗ್

(C) ಸಿ. ವಿ. ರಾಮನ್

(D) ಮೇಲಿನ ಯಾರೂ ಅಲ್ಲ

96. ಪಟ್ಟಿ-I ನ್ನು ಪಟ್ಟಿ-II ರೊಂದಿಗೆ ಸರಿಯಾಗಿ ಹೊಂದಿಸಿ ಮತ್ತು ಕೆಳಗೆ ನೀಡಿದ ಸಂಕೇತಗಳನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆ ಮಾಡಿ :

| ಪಟ್ಟಿ – I | ಪಟ್ಟಿ – II |
|---|---|
| a. ಎಡ್ರಿನಾಲಿನ್ | 1. ಕೋಪ, ಭಯ, ಅಪಾಯ |
| b. ಈಸ್ಟ್ರೋಜನ್ | 2. ವಾಸನೆಯ ಮೂಲಕ ಜೊತೆಗಾರನನ್ನು ಆಕರ್ಷಿಸುವುದು |
| c. ಇನ್ಸುಲಿನ್ | 3. ಹೆಂಗಸರು |
| d. ಫೆರೋಮೋನ್ಸ್ | 4. ಗ್ಲೂಕೋಸ್ |

ಸಂಕೇತಗಳು :

| | a | b | c | d |
|---|---|---|---|---|
| (A) | 3 | 1 | 4 | 2 |
| (B) | 1 | 3 | 2 | 4 |
| (C) | 1 | 3 | 4 | 2 |
| (D) | 3 | 1 | 2 | 4 |



Teachingninja.in

97. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

ಭಾರತದ ಸಂವಿಧಾನ ತಿದ್ದುಪಡಿಯನ್ನು ಆರಂಭಿಸುವುದು.

1. ಲೋಕಸಭೆ
2. ರಾಜ್ಯಸಭೆ
3. ರಾಜ್ಯ ಶಾಸಕಾಂಗ
4. ರಾಷ್ಟ್ರಪತಿ

ಮೇಲಿನವುಗಳಲ್ಲಿ ಸರಿಯಾದ ಹೇಳಿಕೆ/ಗಳು ಯಾವುವು ?

(A) ಕೇವಲ 1
(B) 1, 2 ಮತ್ತು 3
(C) 2, 3 ಮತ್ತು 4
(D) 1 ಮತ್ತು 2

98. ಅಂತಾರಾಷ್ಟ್ರೀಯ ಒಪ್ಪಂದಗಳನ್ನು ಭಾರತದ ಯಾವುದೇ ಭಾಗ ಅಥವಾ ಸಮಗ್ರ ದೇಶದಲ್ಲಿ ಅಳವಡಿಸುವುದಕ್ಕಾಗಿ ಸಂಸತ್ತು ಯಾವುದೇ ಕಾನೂನನ್ನು ಇದರಿಂದ ರಚಿಸಬಹುದು

(A) ಎಲ್ಲಾ ರಾಜ್ಯಗಳ ಸಹಮತದೊಂದಿಗೆ
(B) ಗರಿಷ್ಠ ರಾಜ್ಯಗಳ ಸಹಮತದೊಂದಿಗೆ
(C) ಸಂಬಂಧಪಟ್ಟ ರಾಜ್ಯಗಳ ಸಹಮತದೊಂದಿಗೆ
(D) ಯಾವುದೇ ರಾಜ್ಯದ ಸಹಮತ ಇಲ್ಲದೆ

99. 1992 ರ 73ನೆಯ ಸಂವಿಧಾನದ ತಿದ್ದುಪಡಿ ಕಾಯ್ದೆಯು ಯಾವುದನ್ನು ಉಲ್ಲೇಖಿಸುತ್ತದೆ ?

(A) ಗ್ರಾಮೀಣ ಪ್ರದೇಶದ ನಿರುದ್ಯೋಗಸ್ಥ ಮತ್ತು ಉದ್ಯೋಗ ಕೊರತೆವುಳ್ಳ ಗಂಡಸರು ಮತ್ತು ಹೆಂಗಸರಿಗೆ ಲಾಭದಾಯಕ ಉದ್ಯೋಗಾವಕಾಶವನ್ನು ಸೃಷ್ಟಿಸುವುದು
(B) ಕ್ಷೀಣವಾದ ಕೃಷಿಯ ಕಾಲದಿಂದಾಗಿ ಅಗತ್ಯ ಮತ್ತು ಅಪೇಕ್ಷೆವುಳ್ಳ ಸಶಕ್ತ ಹಿರಿಯ ವಯಸ್ಕರಿಗೆ ಉದ್ಯೋಗಾವಕಾಶವನ್ನು ಸೃಷ್ಟಿಸುವುದು
(C) ದೇಶದಲ್ಲಿ ಬಲಿಷ್ಠ ಹಾಗೂ ಸ್ಪಂದನಶೀಲ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಅಡಿಪಾಯವನ್ನು ಇರಿಸುವುದು
(D) ಸಮಾನತೆಯು ಕಾನೂನಿನ ಎದುರಿನಲ್ಲಿ ವ್ಯಕ್ತಿಗೆ ಜೀವನ, ಸ್ವಾತಂತ್ರ್ಯ ಮತ್ತು ಭದ್ರತೆಗಳಿಗೆ ಭರವಸೆಯ ಹಕ್ಕು ಮತ್ತು ಯಾವುದೇ ಭೇದಭಾವಗಳಿಲ್ಲದೆ ಸಮಾನವಾದ ರಕ್ಷಣೆ

100. ಡಾ. ಬಿ. ಆರ್. ಅಂಬೇಡ್ಕರ್‌ರವರು ಸಂವಿಧಾನದ ಯಾವ ಹಕ್ಕನ್ನು ಹೃದಯ ಮತ್ತು ಆತ್ಮವೆಂದು ವಿವರಿಸಿದ್ದರು ?

(A) ಧರ್ಮದ ಸ್ವಾತಂತ್ರ್ಯದ ಹಕ್ಕು
(B) ಆಸ್ತಿಯ ಹಕ್ಕು
(C) ಸಮಾನತೆಯ ಹಕ್ಕು
(D) ಸಂವಿಧಾನಬದ್ಧ ಪರಿಹಾರದ ಹಕ್ಕು



Teachingninja.in